ವಿಷ್ಣುತೀರ್ಥರೊಡನೆ ಮಾತುಕತೆ



ಕುಮುದ ರಾ.ವೆಂ.ಶ್ರೀ.

Scanned by CamScanner

ವಿಷ್ಣುತೀರ್ಥರೊಡನೆ ಮಾತುಕತೆ

ಕುಮುದ ರಾ.ವೆಂ.ಶ್ರೀ.

Scanned by CamScanner

VISHNUTIRTHARODANE MAATUKATE—a transcription of a recorded conversation in Kannada between Sri P Vishnutirtha of Nava Vrindavana and Smt. Kumada R. V. S., brought out on the occasion of the Centenary Celebration of Sri P Vishnutirtha on 1 April 2012 at Bangalore.

Printed at Sri Shakti Electric Press, Jayanagar, Mysore 570 014

Scanned by CamScanner

ಸಾರ್ಥಕ ಬದುಕು

"ಸಹಸ್ರಶೀರ್ಷಾಪುರುಷಃ ಸಹಸ್ರಾಕ್ಷ ಸಹಸ್ರಪಾತ್ . . . ." ಇದು ಪುರುಷಸೂಕ್ತದ ಮೊದಲ ಮಂತ್ರ, ಸಾಲಿಗ್ರಾಮಕ್ಕೆ ಅಭಿಷೇಕ ಮಾಡುವಾಗ ಹೇಳುವ ಮಂತ್ರ. ಇದೇ ಅರ್ಥ ಬರುವಂತೆ ಕನ್ನಡದ ಕವಿಯೊಬ್ಬರು 'ಎಲ್ಲೆಲ್ಲಿಯು ಕೈ, ಎಲ್ಲೆಲ್ಲಿಯು ಕಾಲ್, ಎಲ್ಲೆಲ್ಲಿಯು ಕಣ್ ತಾನಾದ' ಎಂದು ವರ್ಣಿಸಿದ್ದಾರೆ. ಈ ಪುರುಷಸೂಕ್ತದ ಮಂತ್ರಗಳು ಹದಿನಾರು. ಶ್ರೀ ಪಿ. ವಿಷ್ಣುತೀರ್ಥರು ನವವೃಂದಾವನದಲ್ಲಿ ಒಬ್ಬಂಟಿಗರಾಗಿ ಇಪ್ಪತ್ತು ವರ್ಷಕಾಲ ನವಯತಿಗಳ ಸೇವೆ ಮಾಡಿ ನೆನೆಸಿದ ಕಡಲೆಕಾಳನ್ನು ಮಾತ್ರ ಸೇವಿಸುತ್ತಿದ್ದರು. ಅಲ್ಲದೆ ದ್ವೈತ ಅದ್ವೈತ ವಿಶಿಷ್ಟಾದ್ವೈತ ಸಿದ್ಧಾಂತದ ಪ್ರಕಾರ ಅನೇಕ ಜ್ಞಾನಿಗಳು ಬರೆದ ವ್ಯಾಖ್ಯಾನಗಳನ್ನು ಅಧ್ಯಯನ ಮಾಡಿ ಒಂದು ವ್ಯಾಖ್ಯಾನಕ್ಕೂ ಇನ್ನೊಂದು ವ್ಯಾಖ್ಯಾನಕ್ಕೂ ಇರುವ ಹೋಲಿಕೆ ವ್ಯತ್ಯಾಸಗಳನ್ನು ತಿಳಿಸುತ್ತಾ ಮಧ್ಯೆ ಮಧ್ಯೆ ತಮ್ಮ ಅಭಿಪ್ರಾಯಗಳನ್ನು ತಿಳಿಸಿ ಒಂದು ಪುಸ್ತಕ ಬರೆದರು. ಅವರ ಹತ್ತು ವರ್ಷದ ತಪಸ್ಸಿನ ಫಲವೇ ಅವರು ಬರೆದ *ಪುರುಷಸೂಕ್ತ*.

ತಿರುಪತಿ ದೇವಸ್ಥಾನದ ಸಮಿತಿಯವರು ಈ ಪುರುಷಸೂಕ್ತವನ್ನು ಮೂರು ಭಾಗಗಳಲ್ಲಿ ಪ್ರಕಟಿಸುವುದಕ್ಕೆ ಹಣ ಸಹಾಯ ಕೊಡಲು ಒಪ್ಪಿಗೆ ಕೊಟ್ಟರು. ಹೀಗಾಗಿ ಆ ಪುಸ್ತಕ ಮುದ್ರಣಕ್ಕಾಗಿ ನಮ್ಮ ಮುದ್ರಣಾಲಯಕ್ಕೆ ಬಂತು. ಅಕ್ಷರ ಜೋಡಣೆ ಆದ ಮೇಲೆ ಒಂದು ಮತ್ತು ಎರಡನೆ ಪ್ರೂಫ್‌ಗಳು ಅಂಚೆಯ ಮೂಲಕ ಬೆಂಗಳೂರಿಗೆ ಹೋಗಿ ಅದು ತಿದ್ದುಪಡಿಯಾಗಿ ಬರುವುದು ಮತ್ತೆ ಕಳಿಸುವುದು ಇದರಿಂದ ನಮಗೆ ನಿಗದಿಪಡಿಸಿದ ಕಾಲದಲ್ಲಿ ಮುದ್ರಣ ಮುಗಿಸಲು ಕಷ್ಟವಾಗುತ್ತದೆ ಎನ್ನಿಸಿತು. ಎರಡನೆಯದಾಗಿ ಹಸ್ತಪ್ರತಿಯ ಅಕ್ಷರಗಳು ಸ್ಪಷ್ಟವಾಗಿ ಇರಲಿಲ್ಲ. ಮೊಳೆ ಜೋಡಿಸುವವರಿಗೆ ಅದನ್ನು ಅರ್ಥ ಮಾಡಿಕೊಳ್ಳುವುದು ಕಷ್ಟವಾಗುತ್ತಿತ್ತು. ಆದ್ದರಿಂದ ಶ್ರೀವಿಷ್ಣುತೀರ್ಥರು ನಮ್ಮ ಮನೆಯಲ್ಲೇ ಇದ್ದು ಮುದ್ರಣಕಾರ್ಯವನ್ನು ನೋಡಿಕೊಳ್ಳುವುದು ಒಳ್ಳೆಯದು ಎಂದು ಅವರಿಗೆ ಸಲಹೆ ಕೊಟ್ಟೆವು. ಅದಕ್ಕೆ ಆ ಮಹಾನುಭಾವರು ದೊಡ್ಡಮನಸ್ಸು ಮಾಡಿ ಆ ಸಲಹೆಗೆ ಒಪ್ಪಿಕೊಂಡು ನಮ್ಮ ಮನೆಗೆ ಬಂದರು.

ಮಾರನೆ ದಿನದಿಂದ ಬೆಳಗ್ಗೆ ಅವರ ದೇವರ ಪೂಜೆಗೆ ಅಣಿ ಮಾಡಿಕೊಡುವುದು ಪೂಜೆ ಆದ ಮೇಲೆ ಬಿಸಿಬಿಸಿಯಾಗಿ ಕಾಫಿ ಕೊಡುವುದು, ಊಟಕ್ಕೆ ಸಿದ್ಧಮಾಡಿ ಬಡಿಸುವುದು, ಮಧ್ಯಾಹ್ನದ ಕಾಫಿ, ಸಂಜೆ ಫಲಾಹಾರಕ್ಕೆ ಮಾಡಿಕೊಡುವುದು ಹೀಗೆ ನನ್ನ ದಿನಚರಿಯನ್ನು ಸಿದ್ಧಮಾಡಿಕೊಂಡೆ. ದಿನವೂ ದೇವರಪೂಜೆ, ಅಲ್ಲದೆ ಅವರ ಬಳಿ ಇದ್ದ ಅಪರೂಪದ ಸಾಲಿಗ್ರಾಮಗಳ ದರ್ಶನ ಮತ್ತು ಐದು ಯತಿಗಳ ಬೃಂದಾವನಕ್ಕೂ ಪೂಜೆ ನಡೆಯುತ್ತಿತ್ತು. ಹೀಗಾಗಿ ಹಿರಿಯರ, ಜ್ಞಾನಿಗಳ, ದೇವರ ಮತ್ತು ಐದು ಯತಿಗಳ ಕಿಂಚಿತ್ ಸೇವೆ ಮಾಡುವ ಅವಕಾಶ ದೊರೆಯಿತಲ್ಲ ಎಂದು ನನಗೆ ಎಲ್ಲಿಲ್ಲದ ಉತ್ಸಾಹ, ಬಹಳ ಶ್ರದ್ಧಾಭಕ್ತಿಯಿಂದ ಕೆಲಸ ಮಾಡುತ್ತಿದ್ದೆ. ಈ ರೀತಿಯ ನಿಕಟ ಬಾಂಧವ್ಯದಿಂದ ಶ್ರೀವಿಷ್ಣುತೀರ್ಥರು ನಮ್ಮ

Scanned by CamScanner

ಸೊಸೆ ನಳಿನಿಗೆ ಮಾತ್ರ ದೊಡ್ಡಪ್ಪ ಆಗದೆ ನನಗೂ ಅವರು ದೊಡ್ಡ ಅಪ್ಪ ಆದರು. ನಾನೂ ಅವರನ್ನು ದೊಡ್ಡಪ್ಪ ಎಂದೇ ಕರೆಯುತ್ತಿದ್ದೆ.

ಪುರುಷಸೂಕ್ತದ ಹಸ್ತಪ್ರತಿಯನ್ನು ಬೇರೆ ಬರೆಸುವುದೆಂದು ತೀರ್ಮಾನಿಸಿದೆವು. ನಮ್ಮ ಬೀಗರು ಒಬ್ಬರು ಸ್ವಯಂಪ್ರೇರಣೆಯಿಂದ ಹಸ್ತಪ್ರತಿಯನ್ನು ನಕಲು ಮಾಡಿಕೊಡಲು ಒಪ್ಪಿದರು. ಅದರಂತೆ ಮಧ್ಯಾಹ್ನ 4 ಗಂಟೆಗೆ ನಮ್ಮ ಮನೆಗೆ ಬರುತ್ತಿದ್ದರು. ದೊಡ್ಡಪ್ಪ ಅವರಿಗೆ ಹಸ್ತಪ್ರತಿ ಓದಿ ಹೇಳುತ್ತಿದ್ದರು. ಅವರು ಬರೆಯುತ್ತಿದ್ದರು. ಈ ನಕಲು ಮಾಡಿದ್ದರಿಂದ ಮೊಳೆ ಜೋಡಿಸುವವರಿಗೆ ಸುಲಭವಾಯಿತು. ಅಲ್ಲದೆ ದೊಡ್ಡಪ್ಪ ಅವರ ಬಳಿ ಅಧ್ಯಾತ್ಮ ಚಿಂತನೆ ಮಾಡಲು ಅವರ ಬಳಿಗೆ ಅವರ ಗೆಳೆಯರು ಬರುತ್ತಿದ್ದರು. ಹೀಗೆ ಅವರು ಇರುತ್ತಿದ್ದ ಕೊಠಡಿ ಸತ್ಸಂಗದಿಂದ ಪುನೀತವಾಗುತ್ತಿತ್ತು.

ದೊಡ್ಡಪ್ಪ ಅವರು ಬಹಳ ಸರಳರು, ಮಿತಭಾಷಿಗಳು. ನಮ್ಮ ಮನೆಯಲ್ಲಿ ಅನೇಕ ತೊಂದರೆಗಳು ಇದ್ದವು. ಆದರೂ ಅದು ಒಂದನ್ನೂ ಲೆಕ್ಕಿಸದೆ ತಮ್ಮ ಕರ್ತವ್ಯದ ಕಡೆ ಗಮನ ಹರಿಸುತ್ತಿದ್ದರು. ಇದೆಲ್ಲ ಅವರಲ್ಲಿ ನಾನು ಕಂಡ ಸದ್ಗುಣಗಳು.

ನಮ್ಮ ಮುದ್ರಣಾಲಯದಲ್ಲಿ ಲೆಟರ್‌ಪ್ರೆಸ್ ಹೋಗಿ ಆಫ್‌ಸೆಟ್ ಮಿಷಿನ್ ಬಂದ ಸಮಯ. ಅದರ ವಿಷಯವಾಗಿ ನಮಗೆ ಪೂರ್ಣ ತಿಳಿವಳಿಕೆ ಬರುವವರೆಗೂ ಮುದ್ರಣದ ಸಮಯದಲ್ಲಿ ತುಂಬ ದಿನ ನಷ್ಟವೇ ಆಯಿತು. ಏಕಾದರೂ ಈ ಆಫ್‌ಸೆಟ್ ಮಿಷಿನ್ ಕೊಂಡುಕೊಂಡೆವೊ ಎನ್ನಿಸುತ್ತಿತ್ತು. ಈ ಸಮಯದಲ್ಲಿ ದೊಡ್ಡಪ್ಪ ಅವರು ನಮಗೆ ಅಭಯ ನೀಡಿ ಕ್ಷಿಪ್ರಪ್ರಸಾದ ಗಣಪತಿ ಮಂತ್ರ ಉಪದೇಶಿಸಿ ಅದನ್ನು ಜಪ ಮಾಡುವಂತೆ ನನಗೆ ಹೇಳಿದರು. ಹಾಗೆ ಜಪ ಮಾಡುವ ಸಮಯದಲ್ಲಿ ಅನೇಕ ಅನುಭವಗಳಾದವು. ಅದನ್ನು ಕೇಳಿ ದೊಡ್ಡಪ್ಪ ಸಂತೋಷಪಟ್ಟು ಐದು ಭಾನುವಾರ ನಿಮ್ಮ ಮಗನ ಜೊತೆ ಸೇರಿ ಗಣಪತಿಗೆ ಹಾಲಿನ ಅಭಿಷೇಕ ಮಾಡಿಸಿ ಪೂಜೆ ಮಾಡಿಸಿ ಎಂದರು ಮತ್ತು ಪೂಜಾಕ್ರಮವನ್ನೂ ಬರೆದು ಕೊಟ್ಟರು. ಐದುವಾರ ಪೂಜೆ ಅಂದುಕೊಂಡಿದ್ದು ಇಪ್ಪತ್ತೊಂದು ವಾರದವರೆಗೂ ಮುಂದುವರಿಯಿತು. ಕೊನೆ ಐದು ವಾರ ದೊಡ್ಡಪ್ಪ ಅವರೇ ನಮ್ಮ ಮನೆಯಲ್ಲಿ ಗಣಪತಿಗೆ ಜೇನು ತುಪ್ಪದ ಅಭಿಷೇಕ ಮತ್ತು ಹಾಲಿನ ಅಭಿಷೇಕ ಮಾಡಿದರು. ಹಾಗೆಯೇ ಗಣಹೋಮ ಮಾಡುವಂತೆ ಹೇಳಿದರು. ಅದಕ್ಕೂ ಎಲ್ಲ ಸಿದ್ಧತೆಗಳನ್ನು ಮಾಡಿಕೊಂಡೆವು. ದೊಡ್ಡಪ್ಪ ಅವರಿಗೆ ಬರಲು ಆಗುವುದಿಲ್ಲ ಎಂದು ತಿಳಿಸಿದ್ದರೂ ಗಣಪತಿಯ ಕೃಪೆಯಿಂದ ಅವರ ಸ್ನೇಹಿತರ ಕಾರಿನಲ್ಲಿ ಅನಿರೀಕ್ಷಿತವಾಗಿ ಹೋಮದ ಹೊತ್ತಿಗೆ ಬರುವ ಹಾಗೆ ಆಯಿತು. ನಮಗೆಲ್ಲ ತುಂಬ ಸಂತೋಷವಾಯಿತು. ಹೋಮ, ಪ್ರಸಾದ ವಿನಿಯೋಗ ಎಲ್ಲ ಚೆನ್ನಾಗಿ ನಡೆಯಿತು. ದೊಡ್ಡಪ್ಪ ಅವರ ಸುಮನಸ್ಸಿನಿಂದ ಮುಂದೆ ನಮ್ಮ ಮುದ್ರಣಾಲಯ ಅಭಿವೃದ್ಧಿಗೆ ಬಂತು.

ಈ ಸಮಯದಲ್ಲಿ ಧ್ಯಾನಕ್ಕೆ ಒಂದು ಮಂತ್ರವನ್ನು ಉಪದೇಶಿಸಿ ಎಂದು ನಾನು ಕೇಳಿಕೊಂಡೆ. ರಾಮ ಮಂತ್ರವನ್ನು ಸಂತೋಷದಿಂದ ಉಪದೇಶಿಸಿದರು. ಆ ಜಪ ಒಂದು ಲಕ್ಷ ಮುಟ್ಟಿತ್ತು. ಆದ್ದರಿಂದ ಶ್ರೀರಾಮನ ಹೋಮವೂ ನೆರವೇರಿತು. ಅವರು ಇಲ್ಲಿ ಇರುವಾಗ ಶಿವರಾತ್ರಿ ಬಂತು. ಅಂದು ಸಂಜೆ ರುದ್ರಾಭಿಷೇಕ ಮಾಡಿದರು. ಬಹಳ ಚೆನ್ನಾಗಿತ್ತು. ನವವೃಂದಾವನದ

Scanned by CamScanner

ಯತಿಗಳ, ಅದರಲ್ಲೂ ಶ್ರೀವ್ಯಾಸರಾಯರ ಪೂರ್ಣಕಟಾಕ್ಷ ಅವರಿಗೆ ಇತ್ತು. ಅವರ ಮುಂದೆ ಯಾರಾದರೂ ತಮ್ಮ ಕಷ್ಟ ಹೇಳಿಕೊಂಡರೆ ವ್ಯಾಸರಾಯರನ್ನು ನೆನೆಸಿಕೊಂಡು ಮಂತ್ರಾಕ್ಷತೆ ಕೊಡುತ್ತಿದ್ದರು. ಮಂತ್ರಾಕ್ಷತೆ ಪಡೆದವರೆಲ್ಲರೂ ತಮ್ಮ ಕಷ್ಟ ನಿವಾರಣೆ ಆಯಿತು, ತಮಗೆ ಅನುಕೂಲವಾಯಿತು ಎಂದು ಹೇಳುತ್ತಿದ್ದರು. ದೊಡ್ಡಪ್ಪ ಅವರ ಜೀವನ, ಸಾಧನೆ, ಗುರುಗಳ ಅನುಗ್ರಹ ಇವೆಲ್ಲ ಕೇಳಿ ತಿಳಿದುಕೊಳ್ಳುವ ಆಸೆ ಆಯಿತು. ಅವರ ಸಂದರ್ಶನ ಮಾಡುವ ಮೂಲಕ ನಾನು ಕೇಳಿದ ಬಾಲಿಷ ಪ್ರಶ್ನೆಗಳಿಗೆಲ್ಲ ಸಮಾಧಾನದಿಂದ ಸಂತೋಷದಿಂದ ಉತ್ತರಿಸಿದರು. ತೊಂಬತ್ತು ನಿಮಿಷದ ಕ್ಯಾಸೆಟ್‌ನ ಸಂದರ್ಶನ ಸಿದ್ಧವಾಯಿತು. ಸಾಲಿಗ್ರಾಮ ಪೂಜಾವಿಧಿ ಬಗ್ಗೆ ಅನೇಕ ಪುಸ್ತಕಗಳಿವೆ. ಅದರಲ್ಲಿ ಮುಖ್ಯವಾಗಿ ಮಾಡುವ ಕಲಾಪ ಯಾವುದೂ ನಮಗೆ ತಿಳಿದಿರಲಿಲ್ಲ. ಅದಕ್ಕೆ ಅನೇಕ ವ್ರತಗಳ ಪೂಜೆಯ ಕ್ಯಾಸೆಟ್‌ಗಳಂತೆ ಸಂಕ್ಷಿಪ್ತ ಸಾಲಿಗ್ರಾಮ ಪೂಜಾವಿಧಿ ಮತ್ತು ತಂತ್ರಗಳನ್ನು ಹೇಳಿ ಎಂದು ಕೇಳಿದೆ. ಹೀಗಾಗಿ ಅರ್ಧ ಗಂಟೆ ಒಳಗೆ ಮಾಡಬಹುದಾದ ಸಾಲಿಗ್ರಾಮ ಪೂಜಾ ಪದ್ಧತಿಯನ್ನು ರೆಕಾರ್ಡ್ ಮಾಡಿಕೊಂಡೆ.

ಈಗ ಮತ್ತೆ ಪುರುಷಸೂಕ್ತ ಪುಸ್ತಕದ ವಿಷಯ. ಕರಾರಿನ ಪ್ರಕಾರ ಪುರುಷಸೂಕ್ತದ ಮೊದಲ ಭಾಗ ಅಚ್ಚು ಆದ ಕೂಡಲೆ ಒಂದು ನೂರು ಪುಸ್ತಕಗಳನ್ನು ತಿರುಪತಿ ದೇವಸ್ಥಾನದ ಸಮಿತಿಗೆ ಕಳಿಸಿದೆವು. ಪುರುಷಸೂಕ್ತದ ಹದಿನಾರು ಮಂತ್ರಗಳನ್ನು ಐದು ಮಂತ್ರಗಳಿಗೆ ಒಂದು ಭಾಗದಂತೆ ಮುಗಿಸಬೇಕಿತ್ತು. ಮೊದಲನೆ ಭಾಗದಲ್ಲಿ ಕೇವಲ ಎರಡು ಮಂತ್ರಗಳಿವೆ. ಇದಕ್ಕೆ ನಾವು ಒಪ್ಪುವುದಿಲ್ಲ ಎಂದು ಪತ್ರ ಬರೆದು ತಿರುಪತಿಯವರು ನೂರು ಪುಸ್ತಕಗಳನ್ನು ವಾಪಸ್ಸು ಕಳಿಸಿದರು. ನಮ್ಮ ಮುದ್ರಣಾಲಯದಲ್ಲಿ ಮುಂದಿನ ಭಾಗದ ಮುದ್ರಣ ನಡೆದಿತ್ತು. ನಮ್ಮ ಯಜಮಾನರು ಉಳಿದ ಮೂರು ಮಂತ್ರಗಳನ್ನು ಸೇರಿಸಿ ಬೈಂಡ್ ಮಾಡಿ ನೂರು ಪ್ರತಿಗಳನ್ನು ತಿರುಪತಿಗೆ ಕಳುಹಿಸೋಣವೇ ಎಂದಾಗ ದೊಡ್ಡಪ್ಪನವರು ಆ ಸಲಹೆಯನ್ನು ಒಪ್ಪಲಿಲ್ಲ. ಹಾಗೆಯೇ ತಿರುಪತಿಯಿಂದ ಮುಂಗಡವಾಗಿ ಪಡೆದಿದ್ದ ಹಣವನ್ನೂ ಅವರು ಹಿಂತಿರುಗಿಸಿದರು. ಇದು ದೊಡ್ಡಪ್ಪ ಅವರಿಗೆ ಕೊಂಚ ಬೇಸರವಾದರೂ ಅವರ ನಿರ್ಧಾರ ಅಚಲವಾಗಿತ್ತು. "ದೊಡ್ಡಪ್ಪ, ಬೇಜಾರು ಮಾಡಿಕೊಳ್ಳಬೇಡಿ, ಎಲ್ಲ ಒಳ್ಳೆಯದಕ್ಕೆ ಎಂದುಕೊಳ್ಳೋಣ, ಯಾರ್‍ಯಾರಿಗೆ ಈ ಪುಸ್ತಕ ಅಚ್ಚು ಮಾಡಿಸಿದ ಪುಣ್ಯ ತಲಪಬೇಕೋ ಅವರಿಂದ ಕಾಣಿಕೆ ಬಂದೇ ಬರುತ್ತದೆ" ಎಂದು ನಮ್ಮ ಯಜಮಾನರು ಹೇಳಿದರು. ಅದರಂತೆ ಅನೇಕರಿಂದ ಕಾಣಿಕೆಗಳು ಬಂದವು. ಪುಸ್ತಕದ ಮೂರು ಭಾಗವೂ ಹೂವಿನ ಸರ ಎತ್ತಿದಂತೆ ಸುಲಭವಾಗಿ ಅಚ್ಚಾದುವು.

ದೊಡ್ಡಪ್ಪ ಅವರು ದೇಹ ಬಿಡುವುದಕ್ಕೆ ಒಂದು ವಾರ ಮುಂಚೆ ನಮ್ಮ ಯಜಮಾನರು ಒಂದು ಮದುವೆಗೆ ಬೆಂಗಳೂರಿಗೆ ಹೋಗಿದ್ದವರು ದೊಡ್ಡಪ್ಪ ಅವರನ್ನು ನೋಡಿಕೊಂಡು ಬಂದರು. ಆಗ "ಶ್ರೀ ಗುರೂಜಿ (ಸ್ವಾಮಿ ವಿವೇಕಾನಂದರು), ದೊಡ್ಡಪ್ಪ ಅವರು ಅಷ್ಟು ಕಷ್ಟಪಡುತ್ತಿದ್ದಾರೆ. ಅವರನ್ನು ಕರೆದುಕೊಳ್ಳಬಾರದೆ" ಎಂದು ಕೇಳಿದರು. ಅದಕ್ಕೆ ಶ್ರೀ ಗುರೂಜಿ "ನಾನು ಕರೆದೆ, ತನ್ನ ಸಮಯ ಬರುವವರೆಗೂ ಬರುವುದಿಲ್ಲ ಎಂದು ಹೇಳಿದರು" ಎಂದರು. ತಮ್ಮ ಕರೆ ಬರುವವರೆಗೂ ಎಷ್ಟೇ ಕಷ್ಟ ಆದರೂ ಅನುಭವಿಸಬೇಕು ಎಂಬುದನ್ನು ತೋರಿಸಿ ಕೊಟ್ಟರು. ಶ್ರೀ ಪಿ. ವಿಷ್ಣುತೀರ್ಥರದು ಸಾರ್ಥಕ ಬದುಕು. ದೇವರು, ಗುರುಗಳಲ್ಲಿ ಅವರು

Scanned by CamScanner

ಇಟ್ಟಿದ್ದ ಶ್ರದ್ಧಾ ಭಕ್ತಿ, ಕಾಲಕ್ಕೆ ತಕ್ಕಂತೆ, ಸನ್ನಿವೇಶಕ್ಕೆ ತಕ್ಕಂತೆ ಹೊಂದಿಕೊಳ್ಳುವುದು, ಸದಾ ಅಧ್ಯಯನ, ಸರ್ವೇ ಜನಃ ಸುಖಿನಃ ಎಂಬ ಹಾರೈಕೆ ಈ ಎಲ್ಲ ಗುಣಗಳನ್ನೂ ಅವರು ಮೈಗೂಡಿಸಿಕೊಂಡಿದ್ದನ್ನು ನಾನು ಕಂಡುಕೊಂಡೆ. ನಾವೂ ಈ ಗುಣಗಳನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳೋಣವೆ?

—ಕುಮುದ ರಾ.ವೆಂ.ಶ್ರೀ.

Scanned by CamScanner

ನವವೃಂದಾವನದ ಶ್ರೀ ಪಿ. ವಿಷ್ಣುತೀರ್ಥರು

ನವವೃಂದಾವನದ ಶ್ರೀ ಪಿ. ವಿಷ್ಣುತೀರ್ಥರು ನವವೃಂದಾವನದಲ್ಲಿ ಇಪ್ಪತ್ತು ವರ್ಷ ಏಕಾಂಗಿಯಾಗಿದ್ದು ನವಯತಿಗಳ ಸೇವೆ ಮಾಡಿ ಅಪರೋಕ್ಷವಾಗಿ ಅವರ ಅನುಗ್ರಹವನ್ನು ಪಡೆದವರು. ಇವರು ಅನೇಕ ಪುಸ್ತಕಗಳನ್ನು ಬಹಳ ಸರಳವಾಗಿ ಬರೆದಿದ್ದಾರೆ. ಮನ್ಯುಸೂಕ್ತ ದ್ವಾದಶ ಸ್ತೋತ್ರ, ಪದಶಃ ಅರ್ಥಗಳೊಡನೆ ದೇವರ ಪೂಜಾಪದ್ಧತಿ, ಪಂಪಾ ಮಹಾತ್ಮೆ, ನಾಲ್ಕು ಭಾಗಗಳಲ್ಲಿ ವಾಯುಸ್ತುತಿ, ವಾಯುಸ್ತುತಿ ಸರಳಾರ್ಥ, ನವವೃಂದಾವನ ಯಂತ್ರೋದ್ಧಾರಕ, ಹಂಪೆ ಮಾರ್ಗದರ್ಶಿ, ಅಷ್ಟಮಹಾಮಂತ್ರ, ಗುರುಮಂತ್ರ, ತತ್ವನ್ಯಾಸ ಮಾತೃಕಾನ್ಯಾಸ, ಸರ್ವಸಮರ್ಪಣಗದ್ಯ, ಅಣುಭಾಷ್ಯ, ಹೀಗೆ ಅನೇಕ ಗ್ರಂಥಗಳನ್ನು ಬರೆದಿದ್ದಾರೆ. ಎಲ್ಲಾ ಅಚ್ಚಾಗಿದೆ. ಇಷ್ಟೇ ಅಲ್ಲದೆ ಶ್ರೀಸೂಕ್ತ, ಕೇನೋಪನಿಷತ್, ಈಶಾವಾಸ್ಯ ಉಪನಿಷತ್ ಐತರೇಯ ಉಪನಿಷತ್ ಭಾವಾರ್ಥ, ಬೃಹದಾರಾಣ್ಯಕ ಉಪನಿಷತ್ 3ನೇ ಅಧ್ಯಾಯದ ಭಾವಾರ್ಥ ಹೀಗೆ ಅನೇಕ ಗ್ರಂಥಗಳನ್ನು ಬರೆದಿದ್ದಾರೆ. ಇನ್ನೂ ಎಷ್ಟೋ ಅಚ್ಚಾಗಬೇಕಾಗಿದೆ. ಶ್ರೀ ಪುರುಷಸೂಕ್ತದ ಮೇಲೆ ಇರುವ ಅನೇಕ ವ್ಯಾಖ್ಯಾನಗಳನ್ನು ಸಂಗ್ರಹಿಸಿ ವಿವರಣೆ ಸಹಿತವಾಗಿ ಬರೆದಿದ್ದಾರೆ. ಈ ಪುಸ್ತಕ ನಮ್ಮ ಮುದ್ರಣಾಲಯದಲ್ಲಿ ಅಚ್ಚು ಆಗುವ ಸಂದರ್ಭದಲ್ಲಿ ಈ ಮಹಾನುಭಾವರು ನಮ್ಮ ಮನೆಯಲ್ಲಿ ಕೆಲವು ಕಾಲ ಇದ್ದರು. ಅವರು ತಮ್ಮ ದೇವರುಗಳ ಜೊತೆ ಶ್ರೀಪದ್ಮನಾಭತೀರ್ಥರು, ಶ್ರೀ ಟೀಕಾರಾಯರು, ಶ್ರೀ ವ್ಯಾಸರಾಯರು, ಶ್ರೀಪಾದ ರಾಯರು, ಶ್ರೀ ರಾಘವೇಂದ್ರ ಸ್ವಾಮಿಗಳು ಹೀಗೆ ಐದು ಜನ ಯತಿಗಳ ಬೃಂದಾವನ ಇಟ್ಟು ಕೊಂಡು ಪೂಜೆ ಮಾಡುತ್ತಾರೆ. ದಿನವೂ ಇವರಿಗೆ ದೇವರ ಪೂಜೆಗೆ ಅಣಿಮಾಡಿ ಕೊಡುವ ನೆಪದಲ್ಲಿ ಇವರ ಮತ್ತು ಇವರ ಜೊತೆ ಇರುವ ಐದು ಜನ ಯತಿಗಳ ಸೇವೆ ಮಾಡುವ ಭಾಗ್ಯ ನಮ್ಮ ಪಾಲಿಗೆ ಒದಗಿದ್ದು ನಮ್ಮ ಪುಣ್ಯ. ಈ ಸಂದರ್ಭದಲ್ಲಿ ಅವರೊಡನೆ ನಿಕಟ ಬಾಂಧವ್ಯ ಬೆಳೆದು, ಶ್ರೀ ವಿಷ್ಣುತೀರ್ಥರು ಎಂತಹ ಸರಳ ಜೀವಿಗಳು ಜ್ಞಾನಿಗಳು ಮಹಾನುಭಾವರು ಎಂದು ಪರಿಚಯವಾಯಿತು. ಅವರು ಅನನ್ಯ ಸಾಧನೆಯಿಂದ ಮಾನವಸ್ತರದಿಂದ ದೇವಸ್ತರಕ್ಕೆ ಏರಿದವರು. ಇಂಥವರು ಹೇಗೆ ಸಾಧನೆ ಮಾಡಿದರು, ನವಯತಿಗಳ ಅನುಗ್ರಹ ಹೇಗೆ ಆಯಿತು ಇದೆಲ್ಲ ಅವರ ಬಾಯಿಂದಲೇ ಕೇಳಿದರೆ ಸಾಧಕರಿಗೆ ಮಾರ್ಗದರ್ಶನ ಆಗುತ್ತದೆ ಎಂದು ಯೋಚಿಸಿ ಅವರ ಸಂದರ್ಶನ ಮಾಡುವ ಯೋಚನೆ ಮಾಡಿದೆ. ಇವರು ಸಂತೋಷದಿಂದ ಒಪ್ಪಿ ನನ್ನ ಬಾಲ ಭಾಷೆಯ ಪ್ರಶ್ನೆಗಳಿಗೆ ಸಮಾಧಾನದಿಂದ ಸಂತೋಷದಿಂದ ಉತ್ತರಿಸಿದ್ದಾರೆ.

ಕುಮುದ : ದೊಡ್ಡಪ್ಪ ಈಗ ನಮ್ಮ ಪ್ರೆಸ್ ಅಲ್ಲಿ ಪುರುಷ ಸೂಕ್ತ ಪ್ರಿಂಟ್ ಆಗ್ತಾ ಇದೆಯಲ್ಲ. ನಾನು ಅದರ ಪ್ರೂಫ್ ನೋಡ್ತಾ ಇದ್ದೀನಿ. ಅದನ್ನು ಓದಿದಾಗ ಅದರ ಅರ್ಥ ಎಷ್ಟು ವಿಶಾಲವಾಗಿದೆ, ಏನು ಕತೆ. ನನಗೆ ಒಂದು ಕಡೆ ಸಂತೋಷ, ರೋಮಾಂಚನ ಆಗ್ತಾ ಇದೆ. ಈ ಪುಸ್ತಕಾನ ನೀವು ಬರಿಬೇಕಾದರೆ ಎರಡೇ ಮಂತ್ರಕ್ಕೆ ಮೊದಲನೆ ಭಾಗ ಮುಗಿಯಿತಲ್ಲ,

Scanned by CamScanner

ಇಷ್ಟು ವಿಶಾಲವಾಗಿ ಬರೀಬೇಕಾದರೆ ಎಷ್ಟು ವರ್ಷ ತಗೊಂಡಿರಿ ಅಂತ.

ವಿಷ್ಣುತೀರ್ಥ : ಅದಕ್ಕೆ 1984ನೇ ಇಸವೀಲಿ ಅಂದರೆ ಸುಮಾರು 10 ವರ್ಷದ ಕೆಳಗೆ ಶುರು ಮಾಡಿದೆ. ಮೊದಲು ಪ್ರಾರಂಭ ಮಾಡಿದಾಗ ನಾನು ಕನ್ನಡ ವ್ಯಾಖ್ಯಾನ ಮಾತ್ರ ಕೊಡೋದು ಅಂದುಕೊಂಡೆ. ಚಿಪ್ಪಿಗಿ ಶ್ರೀಮುಷ್ಣ ಸೇತುಮಾಧವಾಚಾರ್ ಎಂಬುವರು ಬರೆದಿದ್ದಾರೆ. ಅದನ್ನು ಕೊಡಬೇಕು ಎಂದುಕೊಂಡೆ. ಬರೀ ಅದು ಕೊಟ್ಟರೆ ಸಾಲುದು. ಸಂಸ್ಕೃತದ ವ್ಯಾಖ್ಯಾನಾನೂ ಕೊಡಬೇಕು. ರಾಘವೇಂದ್ರ ಸ್ವಾಮಿಗಳದು . . . ಕೊಡಬೇಕು ಅಂತ ಹೇಳಿ ಪ್ರಾರಂಭ ಮಾಡಿದೆ. ರಾಘವೇಂದ್ರ ಸ್ವಾಮಿಗಳ ವ್ಯಾಖ್ಯಾನದ ಜೊತೆಗೆ ಸತ್ಯಸಂಧರು ಅಂತ ಮಹಿಷಿಯಲ್ಲಿ ಸ್ವಾಮಿಗಳು ಇದ್ದಾರೆ, ಅವರು ಬರೆದಿದ್ದನ್ನು ಕೊಡಬೇಕು ಅಂತ ಅದನ್ನು ಬರೆದುಕೊಳ್ಳುತ್ತಾ ಬಂದೆ. ಸಂಸ್ಕೃತ ಕೊಡದೆ ಬರೀ ಕನ್ನಡ ಕೊಟ್ಟರೆ ನಮಗೆ ಏನೋ ಬುರುಡೆ ಅನ್ನಿಸುತ್ತೆ. ಅದಕ್ಕೆ ಸಂಸ್ಕೃತ ವ್ಯಾಖ್ಯಾನ ಕನ್ನಡ ವ್ಯಾಖ್ಯಾನ ಎರಡನ್ನು ಜೊತೆ ಜೊತೆಯಾಗಿ ಸೇರಿಸಿಕೊಡಬೇಕು ಅಂತ ಅನ್ನಿಸಿತು. ಹಾಗೆ ಸೇರಿಸಿಕೊಳ್ಳುತ್ತಾ ಬಂದಾಗ ಆ ಎರಡು ವ್ಯಾಖ್ಯಾನ ಬರೆದ ಮೇಲೆ ವಿದ್ಯಾಪೀಠದವರು ವಾದಿರಾಜ ಸ್ವಾಮಿಗಳು ಬರೆದಂಥ ಒಂದು ವ್ಯಾಖ್ಯಾನ ಮಾಡಿದರು. ಆಮೇಲೆ ಉತ್ತರಾದಿ ಮಠದವರು ಸತ್ಯಾಭಿತೀರ್ಥರು ವ್ಯಾಖ್ಯಾನ ಮಾಡಿದರು. ಆ ಎರಡು ವ್ಯಾಖ್ಯಾನದ ಸಾರಾಂಶವನ್ನು ಕೊಡೋಣ ಅಂತ ಮಾಡಿದೆ. ಇಷ್ಟೆಲ್ಲ ಕೊಟ್ಟುಬಿಟ್ಟರೆ ಬರೀ ಮಾಧ್ವರ ವ್ಯಾಖ್ಯಾನ ಆಗುತ್ತೆ. ಅದ್ವೈತ ವ್ಯಾಖ್ಯಾನಗಳನ್ನೂ ಕೊಡೋಣ ಅನ್ನಿಸಿತು. ಸಾಯಣಾಚಾರ್ಯರ ವ್ಯಾಖ್ಯಾನ ಕೊಡೋದಕ್ಕೆ ಶುರುಮಾಡಿದೆ. ಸಾಯಣಾಚಾರ್ಯರದ್ದು ಕೊಟ್ಟರೂ ವಿಶಿಷ್ಟಾದ್ವೈತದ ವ್ಯಾಖ್ಯಾನವನ್ನೂ ಕೊಡಬೇಕೆನಿಸಿತು. ಅದಕ್ಕೆ ಬಹಳ ಕಷ್ಟಪಟ್ಟು ಹುಡುಕಿ ಧಾರವಾಡದಲ್ಲಿರುವ ಶ್ರೀ ಕೆ. ಎಸ್. ನಾರಾಯಣಾಚಾರ್ ಎಂಬ ಪ್ರೊಫೆಸರ್ ಅವರಿಗೆ ಕಾಗದ ಬರೆದೆ. ಅವರ ಸಹಾಯದಿಂದ ವೆಂಕಟರಾಮ ಜೀಯರ್ ಎಂಬ ಒಬ್ಬರು ಯತಿಗಳು ಬರೆದ ವಿಶಿಷ್ಟಾದ್ವೈತ ಭಾಷ್ಯ ತರಿಸಿಕೊಂಡೆ. ಹೀಗೆ ಒಟ್ಟು 7 ವ್ಯಾಖ್ಯಾನ ಆಯಿತು. ಅಷ್ಟರಲ್ಲಿ ಬೆಂಗಳೂರಿನಲ್ಲಿ ಶ್ರೀ ಪ್ರಭಂಜನಾಚಾರ್ಯರು ಇನ್ನೊಂದು ವ್ಯಾಖ್ಯಾನ ಕಳುಹಿದರು. ಹೀಗೆ ಎಂಟು ವ್ಯಾಖ್ಯಾನಗಳನ್ನೂ ಸೇರಿಸಿಕೊಂಡು ಒಂದೊಂದಾಗಿ ಒಂದೊಂದಾಗಿ ಬರೆದುಕೊಳ್ಳುತ್ತಾ ಹೋದೆ. ಒಂದು ಶಬ್ದಕ್ಕೆ ಅನೇಕ ಅರ್ಥಗಳನ್ನು ತೋರಿಸುತ್ತೆ, ಅನೇಕ ವಿಚಾರಗಳು ಬರುತ್ತೆ.

ಕುಮುದ : ಆದರೆ ಅಷ್ಟು ಜನದ ವ್ಯಾಖ್ಯಾನವನ್ನು ವಿವರವಾಗಿ ಓದಬೇಕಲ್ಲ? ಓದದೇ ಬರೆಯಲು ಆಗುವುದಿಲ್ಲ.

ವಿಷ್ಣುತೀರ್ಥ : ಹೌದು ಹೌದು ಸಾಧ್ಯವಿಲ್ಲ.

ಕುಮುದ : ಓದಿಕೋಬೇಕು, ಅದರ ಅರ್ಥ ಬರೀಬೇಕು. ಇದೆಲ್ಲ ಮಾಡಬೇಕಾದರೆ ಎಷ್ಟು ಶ್ರಮಪಟ್ಟಿದ್ದೀರಿ ಅನ್ನಿಸುತ್ತೆ. ಅದಕ್ಕೇ ನಾನು ಕೇಳಿದ್ದು, ಎಷ್ಟು ವರ್ಷ ಬೇಕಾಯಿತು ಅಂತ. ಮಧ್ಯೆ ಮಧ್ಯೆ ಏನೂ ಅಡೆ ತಡೆ ಇಲ್ಲದೆ ಆಗಿದ್ದರೂ ಒಂದೇಸಮನಾಗಿ ಹೇಗೆ ಬಂತು ಅಂತ ನಾನು ಕೇಳುವುದು.

ವಿಷ್ಣುತೀರ್ಥ : ಒಂದೊಂದೇ ವ್ಯಾಖ್ಯಾನ ತಗೊಂಡು, ಅದನ್ನು ಆಳವಾಗಿ ವಿಚಾರಮಾಡಿ,

Scanned by CamScanner

ಮತ್ತೆ ಮತ್ತೆ ವಿಚಾರ ಮಾಡಿ ಬರೀಬೇಕಾಯಿತು. ಒಂದು ವ್ಯಾಖ್ಯಾನಕ್ಕೂ ಇನ್ನೊಂದು ವ್ಯಾಖ್ಯಾನಕ್ಕೂ ಸಿದ್ಧಾಂತದಲ್ಲಿ ಸ್ವಲ್ಪ ವ್ಯತ್ಯಾಸ ಬರುತ್ತೆ. ಅದನ್ನೂ ಅಧ್ಯಯನ ಮಾಡಿಕೊಂಡು ಬರೀಬೇಕಾಯಿತು.

ಕುಮುದ : ಇದನ್ನು ಬರೆಯಲು ಹೇಗೆ ಪ್ರೇರಣೆ ಆಯಿತು?

ವಿಷ್ಣುತೀರ್ಥ : ಪ್ರೇರಣೆ, ಮೊದಲಿಂದ ಪುರುಷಸೂಕ್ತ ಬರೀಬೇಕು ಅಂತ ಇಷ್ಟ ಇತ್ತು. ಅಲ್ಲದೆ ಶ್ರೀಶಮೂರ್ತಿಗಳು ಅದನ್ನು ಪ್ರಕಟ ಮಾಡೋಣ ಅಂತ ಹೇಳಿದರು. ತಿರುಪತಿಗೆ ಕಾಗದ ಬರೆದರು, ಅವರು ಅಪ್ಪಣೆ ಕೊಟ್ಟರು. ಹಾಗಾಗಿ ಪ್ರಾರಂಭ ಆಯಿತು.

ಕುಮುದ : ಇದು ಕಡಿಮೆ ಅನುಗ್ರಹ ಅಲ್ಲ. ನಿಮಗೆ ಇದೆಲ್ಲ ಆಗಬೇಕಾದರೆ ದೈವತ್ವದ ಅಂಶ ನಿಮ್ಮಲ್ಲಿ ಇರಬೇಕು. ಅದು ನಿಮಗೆ ಹೇಗೆ ಅನುಗ್ರಹ ಆಯಿತು? ಯಾರ್‍ಯಾರಿಂದ ಅನುಗ್ರಹ ಆಯಿತು? ಯಾವಾಗ ಎಷ್ಟನೆ ವರ್ಷದಲ್ಲಿ ಶುರು ಮಾಡಿಕೊಂಡಿರಿ?

ವಿಷ್ಣುತೀರ್ಥ : ಅದನ್ನ ಹೇಳುತ್ತೀನಿ. 84ನೇ ಇಸವಿಯಲ್ಲಿ ನರಕ ಚತುರ್ದಶಿ ದಿನ ಪ್ರಾರಂಭ ಮಾಡಿದೆ. ಹೋದ ವರ್ಷ ಮಾರ್ಚ್ ತಿಂಗಳಲ್ಲಿ ಮುಗಿತು. ಸುಮಾರು 10 ವರ್ಷ ಶ್ರಮ ಮಾಡಿದ್ದರಿಂದ ಅದು ಮುಗಿಯಿತು.

ಕುಮುದ : ಅದಕ್ಕೆ ಮುಂಚೆ ಏನು ಮಾಡುತ್ತಿದ್ದಿರಿ ?

ವಿಷ್ಣುತೀರ್ಥ : ಅದಕ್ಕೆ ಮುಂಚೆ ವಾಯುಸ್ತುತಿ ಬರೆಯುತ್ತಿದ್ದೆ.

ಕುಮುದ : ಅಲ್ಲ ನಿಮ್ಮ ಜೀವನೋಪಾಯಕ್ಕೆ ಏನು ಮಾಡುತ್ತಿದ್ದಿರಿ? ನವವೃಂದಾವನಕ್ಕೆ ಮುಂಚೆ ಎಲ್ಲಿದ್ದಿರಿ?

ವಿಷ್ಣುತೀರ್ಥ : ಬೆಂಗಳೂರಿನಲ್ಲಿ ಸುಮಾರು 20 ವರ್ಷ ಇದ್ದೆವು. ನವವೃಂದಾವನಕ್ಕೆ ಹೋಗುವುದಕ್ಕೆ ಮುಂಚೆ ನಾನು ನನ್ನ ತಮ್ಮ ಮತ್ತು ಅಣ್ಣ ಇದ್ದರು. ನಾವು ಮೂರು ಜನವೂ ವಿದ್ಯಾರ್ಥಿಗಳಿಗೆ ಪಾಠ ಹೇಳಿಕೊಡುತ್ತಿದ್ದೆವು. ಅದರಿಂದ ನಮ್ಮ ಜೀವನ ನಡೆಯುತ್ತಿತ್ತು.

ಕುಮುದ : ಆಮೇಲೆ ಈ ಕಡೆ ಹೋಗಬೇಕು ಅಂತ ಮನಸ್ಸಾಯಿತಾ?

ವಿಷ್ಣುತೀರ್ಥ : ರಾಘವೇಂದ್ರಸ್ವಾಮಿಗಳಿಂದ ಪ್ರೇರಣೆ ಬಂತು. ಮೊದಲು ಯಂತ್ರೋದ್ಧಾರಕಕ್ಕೆ ಹೋದೆ. ಅಲ್ಲಿಂದ ನವವೃಂದಾವನಕ್ಕೆ ಹೋದೆ.

ಕುಮುದ : ಮಂತ್ರಾಲಯಕ್ಕೆ ಹೋಗಿದ್ದಿರಿ ಅಂತ ಕೇಳಿದೆ. ಅಲ್ಲಿ ಎಷ್ಟು ವರ್ಷ ಇದ್ದಿರಿ?

ವಿಷ್ಣುತೀರ್ಥ : 1947 ಇಸವಿ ಏಪ್ರಿಲ್ ತಿಂಗಳಿಂದ ಡಿಸೆಂಬರ್‌ವರೆಗೆ ಸುಮಾರು 8 ತಿಂಗಳು ಅಲ್ಲಿ ಇದ್ದೆ. ನಿರಂತರವಾಗಿ ಇದ್ದೆ.

ಕುಮುದ : ಆಗ ಏನು ಮಾಡಿದಿರಿ?

ವಿಷ್ಣುತೀರ್ಥ : ಅಷ್ಟಮಹಾಮಂತ್ರಗಳು ಆಗಿತ್ತು. ರಾಯರ ಸೇವೆ ಮಾಡುತ್ತಾ ಮಂತ್ರಗಳ ಜಪ ಮಾಡುತ್ತಾ ರಾಯರ ಅನುಗ್ರಹಕ್ಕಾಗಿ ಕಾಯ್ತ ಇದ್ದೆ.

ಕುಮುದ : ಅಪರೋಕ್ಷವಾಗಿ ಅದರ ಅನುಗ್ರಹ ಆಗಿದೆ ಅಂದರೆ ಅದರಲ್ಲಿ ತಪ್ಪಿಲ್ಲ.

ವಿಷ್ಣುತೀರ್ಥ : ಅದರಲ್ಲಿ ಏನೂ ತಪ್ಪಿಲ್ಲ.

Scanned by CamScanner

ಕುಮುದ : ನಿಮಗೆ ಇಷ್ಟೆಲ್ಲ ಪಾಂಡಿತ್ಯ ಬರುವುದಕ್ಕೆ ಏನು ಕಾರಣ ಅಂತ?

ವಿಷ್ಣುತೀರ್ಥ : ಅಧ್ಯಯನ ಒಂದು, ರಾಯರ ಅನುಗ್ರಹ ವಿಶೇಷವಾಗಿ.

ಕುಮುದ : ಮಂತ್ರಾಲಯದಿಂದ ಎಲ್ಲಿಗೆ ಹೋದಿರಿ?

ವಿಷ್ಣುತೀರ್ಥ : ಮಂತ್ರಾಲಯದಿಂದ ಬೆಂಗಳೂರಿಗೆ ಬಂದುಬಿಟ್ಟೆ. ಮೂರು ವರ್ಷ ಆಗಿತ್ತು. 50ನೇ ಇಸವಿಯಲ್ಲಿ ಆರಾಧನೆಗೆ ಹೋಗಿದ್ದಾಗ ಅಲ್ಲಿ ಒಂದು ಸೂಚನೆ ಕೊಟ್ರು.

ಕುಮುದ : ಏನು? ಅದನ್ನೆ, ಅಂಥವನ್ನೆಲ್ಲ ನಾನು ಕೇಳಬೇಕೂ ಅಂತ ಆಸೆ. ಸ್ವಲ್ಪ ವಿವರವಾಗಿ ಹೇಳಿ. ನೀವು ಮಂತ್ರಾಲಯಕ್ಕೆ ಹೋದರಲ್ಲ ಅಲ್ಲಿ ನಿಮಗೆ ಯಾವ ರೀತಿ ಸೂಚನೆ ಆಯಿತು?

ವಿಷ್ಣುತೀರ್ಥ : 47ನೇ ಇಸವಿಯಲ್ಲಿ ಮಂತ್ರಾಲಯಕ್ಕೆ ಹೋದಾಗ ಆಗ ಒಂದು ಸೂಚನೆ ಕೊಟ್ರು. ಇನ್ನು ಕೆಲವು ವಿಷಯ ಮಾತಾಡಕ್ಕೆ ಆಗೊಲ್ಲ. ನೀನು ಊರಿಗೆ ಹೋಗಿಬಿಡು ಅಂತ. ಆಗ ನಾನು, ಊರಿಗೆ ಹೋದರೆ ಮತ್ತೆ ತಿರುಗಿ ನಾನು ಬರುವುದಕ್ಕೆ ಆಗುತ್ಯೆ ಸ್ವಾಮಿ ಅಂತ ಗುರುಗಳನ್ನು ಕೇಳಿಕೊಂಡೆ. ಆಗ ಗುರುಗಳೇ ಹೇಳಿದರು, ಗುರುಗಳು ಹೇಳಿದ್ದು ಸರಿ ಅಂತ ಒಪ್ಪಿಕೋತೀಯೋ ಇಲ್ಲವೋ? ಹಾಗಾದರೆ ಅವರು ಕರೆಸಿಕೋಬೇಕು ಅಂದರೆ ಕರೆಸಿಕೋತಾರೆ. ನಿನಗೆ ವಿಶ್ವಾಸ ಇದೆಯೊ ಇಲ್ಲವೊ? ಅಂದರು. ನನಗೆ ಅವರಲ್ಲಿ ಪೂರ್ಣ ವಿಶ್ವಾಸ ಇದ್ದಿದ್ದರಿಂದ ಹಾಗೇ ಆಗಲಿ ಎಂದು 48ನೇ ಇಸವಿಯಲ್ಲಿ ಬೆಂಗಳೂರಿಗೆ ಬಂದೆ. 50ನೇ ಇಸವಿಯಲ್ಲಿ ಅಲ್ಲಿಗೆ ಹೋಗುವುದಕ್ಕೆ ಒಂದು ಪ್ರೇರಣೆ ಬಂತು. ಮಂತ್ರಾಲಯದಲ್ಲಿ ವಾಗೀಂದ್ರಾಚಾರ್ ಎಂಬುವರು ಪೂಜೆ ಮಾಡುತ್ತಿದ್ದರು. ಅವರ ಮಗ ವಾಸುದೇವಾಚಾರ್ ಎಂಬುವರಿಗೆ ಹಿಂದಿ, ಇಂಗ್ಲಿಷ್ ಎಲ್ಲ ಭಾಷೆನೂ ಹೇಳಿಕೊಟ್ಟೆ. ಆರಾಧನೆ ಸಮಯದಲ್ಲಿ ಅವರು, ನಾನು ಆರಾಧನೆಗೆ ಹೋಗ್ತಾ ಇದ್ದೀನಿ . . .

ಕುಮುದ : ಎಲ್ಲಿಗೆ?

ವಿಷ್ಣುತೀರ್ಥ : ಮಂತ್ರಾಲಯಕ್ಕೆ. ಶ್ರಾವಣ ಮಾಸ ಬಂತು. ವರಮಹಾಲಕ್ಷ್ಮಿ ಹಬ್ಬದ ಹೊತ್ತಿಗೆ ಅವರು ಹೋದರು. ಹೋಗ್ತಾ, ನೀವೂ ಬಂದು ಬಿಡಿ ಎಂದರು. ಹೀಗೆ ಮಂತ್ರಾಲಯಕ್ಕೆ ಹೋಗುವ ಸಂದರ್ಭ ಒದಗಿತು. ಆಗ ನನ್ನ ಹತ್ತಿರ ದುಡ್ಡು ಇರಲಿಲ್ಲ. ಆಮೇಲೆ ದುಡ್ಡು ಒದಗಿತು. ಅಲ್ಲದೆ ನನ್ನ ತಮ್ಮ ಆಗ ಮದರಾಸಿನಲ್ಲಿದ್ದ. ಅವನೂ ಬರ್ತೀನಿ ಅಂದ. ನಾವಿಬ್ಬರೂ ಗುಂತಕಲ್‌ನಲ್ಲಿ ಸೇರಿ ಆರಾಧನೆಗೆ 50ನೇ ಇಸವಿಯಲ್ಲಿ ಹೋದೆವು.

ಪೂರ್ವಾರಾಧನೆ ದಿವಸ ರಾತ್ರಿ ಮಂತ್ರಾಕ್ಷತೆ ಕೊಟ್ಟರು. ರಾತ್ರಿ ಸೇವೆ ಮಾಡಿ ಮಲಗಿಕೊಂಡಾಗ ಗುರುಗಳ ಆರಾಧನೆ ದಿವಸವೆ ನನಗೆ ಒಂದು ಸ್ವಪ್ನ ಆಯಿತು. ರಾಘವೇಂದ್ರ ಸ್ವಾಮಿಗಳು, ಏನೋ? ಹೇಗಿದೀಯೋ? ಬಾರೋ, ಅಂತ ಹೇಳಿ ಕಳಿಸಿ ನನ್ನ ಹೊಟ್ಟೆನೆಲ್ಲ ಚೆಕ್ ಮಾಡಿ ಏನೋ ಎಷ್ಟೊಂದು ತುಂಬಿಕೊಂಡಿದ್ದಿ. ಈಗೆಲ್ಲ ಖಾಲಿ ಆಯಿತು ಎಂದರು.

ಕುಮುದ : ಏನಾಗಿತ್ತು ನಿಮಗೆ?

ವಿಷ್ಣುತೀರ್ಥ : ನನಗೆ ರೋಗ ಬಂದಿತ್ತು. ರೋಗವನ್ನು ಅನುಭವಿಸುತ್ತಾ ಮೈಮೇಲೆ ಎಗ್ಜಿಮ ಆಗಿ ಮಚ್ಚೆ ಮಚ್ಚೆ ಆಯಿತು. ರಾಘವೇಂದ್ರ ಸ್ವಾಮಿಗಳ ಅನುಗ್ರಹದಿಂದ ಎಲ್ಲ

Scanned by CamScanner

ಪರಿಹಾರ ಆಯಿತು. ಆದರೂ ಕೈಮೇಲೆ ಇನ್ನೂ ಸ್ವಲ್ಪ ಇತ್ತು. ಅದನ್ನು ತೋರಿಸಿದಾಗ ಅದೇನು ಮಾಡುತ್ತೆ ಹೋಗೋ ಇಷ್ಟು ಕಡಲೆಕಾಳು ನೆನೆಹಾಕಿಕೊಂಡು ತಿನ್ನು, ಅಂದರು. ಅದರಿಂದ ನನಗೆ ಮುಂದೆ ಅನುಕೂಲ ಆಯಿತು. ಅನೇಕ ವರ್ಷಗಳು ನಾನು ಹೆಸರುಕಾಳು, ಕಡಲೆಕಾಳು ತಿಂದುಕೊಂಡಿದ್ದು ವಿಶೇಷ. ಮುಖ್ಯ ಆರಾಧನೆ ದಿವಸ ಸಾಯಂಕಾಲ ರಾಯರು ರಥದಲ್ಲಿ ಹೋಗುತ್ತಿದ್ದಾಗ ಒಂದು ಉತ್ತತ್ತಿ ರಥದಿಂದ ಬಂದು ಬಿದ್ದ ಹಾಗಾಯಿತು.

ಕುಮುದ : ಇದು ಕನಸಿನಲ್ಲೇ? ಅಥವಾ ನಿಜವಾಗಿಯೇ?

ವಿಷ್ಣುತೀರ್ಥ : ಇಲ್ಲ, ನಿಜವಾಗಿಯೂ. ಆರಾಧನೆ ದಿವಸ ನಾನು ನನ್ನ ತಮ್ಮ ಉತ್ಸವ ನೋಡ್ತಾ ನಿಂತುಕೊಂಡಿದ್ದೆವು. ರಥ ಹೋಗ್ತಾ ಇದ್ದಾಗ ಅಲ್ಲೊಂದು ಎಲೆಕ್ಟ್ರಿಕ್ ವೈರ್ ಇತ್ತು. ಅಲ್ಲಿಂದ ಒಂದು ಉತ್ತತ್ತಿ ಬಂದು ಬಿತ್ತು. ಅದು ನೋಡುತ್ತಿದ್ದಾಗ ನನ್ನ ಕೈ ಒಳಗೆ, ಇತ್ತು. ರಾಘವೇಂದ್ರ ಸ್ವಾಮಿಗಳು ನನಗೆ ಪ್ರಸಾದ ಕೊಟ್ಟರು ಎಂದು ತುಂಬ ಸಂತೋಷ ಆಯಿತು. ಆದರೆ ರಥ ಮುಂದಕ್ಕೆ ಹೋದ ಮೇಲೆ ನನಗೆ ಸಂಶಯಬಂತು. ಫಲ ಮಂತ್ರಾಕ್ಷತೆ ಎರಡೂ ಕೊಡಬೇಕು, ಬರಿ ಒಂದು ಫಲ ಕೊಟ್ಟರಲ್ಲ ಯಾಕೆ ಅಂತ ಅನುಮಾನ ಬಂತು. ನಾನು ಆ ಪೂಜಾರಿಯನ್ನು ಕೇಳಿದೆ. ರಾಘವೇಂದ್ರಚಾರ್ ಅಂತ. ಅವರು ನನ್ನಲ್ಲಿ ತುಂಬ ವಿಶ್ವಾಸ ಇಟ್ಟುಕೊಂಡಿದ್ದರು. ಅವರು ನೋಡಿ ಬಹಳ ಆಶ್ಚರ್ಯಪಟ್ಟು, ರಾಯರ ಅನುಗ್ರಹ ಅಪ್ಪ, ನಿನ್ನಂಥವರಿಗೆ ನನ್ನಂಥವರು ಉತ್ತರ ಹೇಳುವುದಕ್ಕೆ ಆಗುವುದಿಲ್ಲ. ನೀವು ರಾಯರನ್ನೇ ಕೇಳಿಕೊಳ್ಳಿ, ಅಂತ ಆ ಉತ್ತತ್ತಿ ಮತ್ತು ಜೊತೆಗೆ ಮಂತ್ರಾಕ್ಷತೆ ವೃಂದಾವನದ ಮೇಲಿಟ್ಟು ಮಂಗಳಾರತಿ ಮಾಡಿ ನನ್ನ ಕೈಗೆ ಹಾಕಿ ಪ್ರಾರ್ಥನೆ ಮಾಡಿಕೊಳ್ಳಿ ಎಂದರು. ಅದರಂತೆ ರಾತ್ರಿ ಪ್ರಾರ್ಥನೆ ಮಾಡಿಕೊಂಡೆ. ರಾತ್ರಿ ಅದನ್ನು ಸೆರಗಿನಲ್ಲಿ ಕಟ್ಟಿಕೊಂಡು ಮಲಗಿಕೊಂಡೆ. ಮೂರನೆ ದಿನ ಒಂದು ಸ್ವಪ್ನ ಆಯಿತು. ಹಿಂದಿನ ಸುಯಮೀಂದ್ರ ಸ್ವಾಮಿಗಳು ಬಾರೋ ಇಲ್ಲಿ ಅಂತ ಅವರು ಸಾವಿರಾರು ಜನರು ಜೊತೆ ನಿಂತಿದ್ದಾಗ ನನ್ನನ್ನು ಮುಂದಕ್ಕೆ ಕರೆದು ಪ್ರಸಾದ ಹಿಡಿ ಅಂದರು. ನಾನು ಬೊಗಸೆ ಹಿಡಿದೆ. ಅಷ್ಟು ಅಲ್ಲವೊ ಸೆರಗು ಹಿಡಿ ಅಂದರು. ನಾನು ಸೆರಗು ಒಡ್ಡಿದಾಗ ಪಂಚಖಾದ್ಯ ಅಂತ ಕಲ್ಲುಸಕ್ಕರೆ, ಬಾದಾಮಿ, ದ್ರಾಕ್ಷಿ, ಗೋಡಂಬಿ, ಕೊಬ್ಬರಿ ಖರ್ಜೂರ, ಎಲ್ಲ ಸೇರಿದಂತೆ ಒಂದು ದೊಡ್ಡ ಪ್ರಸಾದ, ಒಂದು ಮೊರದಷ್ಟು ಹಾಕಿದರು. ಆದರೆ ಎಲ್ಲ ಚೆಲ್ಲಿ ಹೋಯಿತು. ಅಷ್ಟರೊಳಗೆ ಒಂದು ಹುಡುಗ ಬಂದು ಸ್ವಾಮಿ ಅದರಲ್ಲಿ ಕೊಬ್ಬರಿ ಇದೆಯಲ್ಲ ಅದು ಬೇಕಂತೆ ಅಂದ. ಆ ಹುಡುಗನೇ ತಗೋಬೇಕೋ ನಾನೇ ಕೊಡಬೇಕೋ ಸಂದೇಹದಲ್ಲಿ ಇದ್ದೆ. ಅದರ ಅರ್ಥ ಆಮೇಲೆ ನನಗೆ ಗೊತ್ತಾಯಿತು ನಾನು ಅವರನ್ನು ಕೇಳಿದ್ದು ಜ್ಞಾನ, ಜ್ಞಾನವನ್ನು ಕೊಡುವುದಕ್ಕೆ ನಾನಲ್ಲ ಮುಖ್ಯ ಪ್ರಾಣ ದೇವರು ಮುಖ್ಯ. ನಾವು ಕೊಡುವ ಜ್ಞಾನವನ್ನು ಕೊಟ್ಟಿದ್ದೇವೆ. ಜ್ಞಾನ ಫಲ ಬೇಕಾಗಿದ್ದರೆ ನೀನು ಯಂತ್ರೋದ್ಧಾರಕ ಪ್ರಾಣದೇವರ ಸೇವೆ ಮಾಡು ಅಂತ ಸೂಚನೆ ಕೊಟ್ಟರು.

ಕುಮುದ : ಅದರಲ್ಲಿ ಕಾಯಿ ಕೊಡುವುದಕ್ಕೂ ಇದಕ್ಕೂ ಏನು ಸಂಬಂಧ?

ವಿಷ್ಣುತೀರ್ಥ : ಕಾಯಿ ಕೊಡುವುದು ಪೂರ್ಣ ಫಲ.

ಕುಮುದ : ಅದರಲ್ಲಿ ಇದ್ದಿದ್ದು ಕೊಬ್ಬರಿನಾ?

Scanned by CamScanner

ವಿಷ್ಣುತೀರ್ಥ : ಕೊಬ್ಬರಿ ಪೂರ್ಣಫಲ ಅಂತ. ಪೂರ್ಣ ಫಲ ಅಂದರೆ ನಾನು ಕೇಳಿದ್ದು ಜ್ಞಾನ. ಅದೇ ಪೂರ್ಣ ಫಲ. ಐಹಿಕದ್ದು ಕೇಳಿದ್ದರೆ ರಾಯರೇ ಕೊಡುತ್ತಿದ್ದರು. ನಾನು ಕೇಳಿದ್ದು ಅದಲ್ಲ. ಆದ್ದರಿಂದ ಮುಖ್ಯವಾದದ್ದು ಜ್ಞಾನ, ಪ್ರಾಣದೇವರು ಕೊಡ್ತಾರೆ ಅಂದರು. ಅವರ ಅನುಗ್ರಹದಿಂದ ಸಿಕ್ಕುತ್ತೆ. ಹೀಗಾಗಿ ಯಂತ್ರೋದ್ಧಾರಕ ಪ್ರಾಣದೇವರ ಹತ್ತಿರ ಹೋದೆ.

ಕುಮುದ : ಅದು ಎಲ್ಲಿರುವುದು?

ವಿಷ್ಣುತೀರ್ಥ : ಹೊಸಪೇಟೆ ಹತ್ತಿರ ಹಂಪೆ ಅಂತ ಇದೆ. ಅಲ್ಲಿ ಚಕ್ರತೀರ್ಥ ಅಂತ ಇದೆ. ಯಂತ್ರೋದ್ಧಾರಕನನ್ನು ಅದರ ದಕ್ಷಿಣದ ದಡದಲ್ಲಿ ಒಂದು ಗುಡ್ಡದ ಮೇಲೆ ವ್ಯಾಸರಾಯರು ಪ್ರತಿಷ್ಠೆ ಮಾಡಿದರು.

ಕುಮುದ : ಅದಕ್ಕೆ ಯಂತ್ರೋದ್ಧಾರಕ ಅಂತ ಹೆಸರು ಏಕೆ?

ವಿಷ್ಣುತೀರ್ಥ : ಯಂತ್ರದ ಮಧ್ಯದಲ್ಲಿ ಪ್ರಾಣದೇವರನ್ನು ಕೂಡಿಸಿ ಅವರ ಕೈಯಲ್ಲಿ ಜಪಮಣಿ ಕೊಟ್ಟಿದ್ದಾರೆ. ಆದ್ದರಿಂದ ಅದಕ್ಕೆ ಯಂತ್ರೋದ್ಧಾರಕ ಅಂತ ಹೆಸರು.

ಕುಮುದ : ಅದೇನೋ ಯಾರೋ ಚಿತ್ರ ಬರೀತಿದ್ರು. ಅಂಜನೇಯ?

ವಿಷ್ಣುತೀರ್ಥ : ಹೌದು, ಅದೆಲ್ಲ ಹೇಳುತ್ತಾರೆ.

ಕುಮುದ : ಯಾರು ಅದನ್ನು ಮಾಡಿದ್ದು? ಅದೇನು ಕತೆ?

ವಿಷ್ಣುತೀರ್ಥ : ಅದನ್ನು ಹೇಳ್ತೀನಿ. ಅನೇಕ ಪ್ರಮಾಣ ಆಧಾರಗಳಿವೆ. ಮುಖ್ಯವಾದ ಆಧಾರ ಕೇಶವದಾಸರು ಬರೆದಿದ್ದಾರೆ ಮತ್ತು ವಿಜಯದಾಸರ ಸುಳಾದಿ ಈ ಎರಡು ಆಧಾರ ದಿಂದ ತಿಳಿದುಬರುವಂತೆ ವ್ಯಾಸರಾಯರು ಅಲ್ಲಿ ಪಾಠಪ್ರವಚನ ಮಾಡ್ತಿದ್ರು. ಒಂದು ದಿನ ಸ್ನಾನ ಮಾಡಿಕೊಂಡು ಗುಹೆ ಒಳಗೆ ಜಪಕ್ಕೆ ಕೂತುಕೊಳ್ಳುತ್ತಿದ್ದರು. ಆಗ ಹಿಂದುಗಡೆ ಬಂಡೆ ಯಿಂದ ಒಂದು ಕೋತಿ ಬರುತ್ತಿತ್ತು. ಅನೇಕ ದಿವಸ ಹೀಗೆ ಆಗಿದ್ದರಿಂದ ಯಾಕೆ ಹೀಗೆ ಪ್ರಾಣದೇವರು ಕಾಣಿಸಿಕೊಳ್ಳುತ್ತಿದ್ದಾರೆ? ಅಂತ ಅನ್ನಿಸಿ ರಾತ್ರಿ ಮಲಗಿಕೊಳ್ಳುವಾಗ ನೀನೆ ವರ ಗುರು ಮುಖ್ಯ ಪ್ರಾಣ ಅಂತ ಒಂದು ದೇವರ ನಾಮ ಮಾಡಿ . . .

ಕುಮುದ : ಆ್ಞ, ಏನು?

ವಿಷ್ಣುತೀರ್ಥ : ನೀನೆ ವರಗುರು ಮುಖ್ಯ ಪ್ರಾಣ ಅಂತ ದೇವರ ನಾಮ ಮಾಡಿ ಪ್ರಾಣ ದೇವರನ್ನು ಪ್ರಾರ್ಥನೆ ಮಾಡಿ ಯಾಕೆ ಸ್ವಾಮಿ ಕಾಣಿಸಿಕೊಳ್ಳುತ್ತಿದ್ದೀರಿ? ನನ್ನಿಂದ ಏನು ಸೇವೆ ಆಗಬೇಕು? ಎಂದು ಕೇಳಿಕೊಂಡರು. ಅವರಿಗೆ ಮಾರನೆ ದಿನ ರಾತ್ರಿ ಸ್ವಪ್ನದಲ್ಲಿ ಒಂದು ಸೂಚನೆ ಆಯಿತು. ನೋಡಪ್ಪ ಈ ಬಂಡೆಲಿದ್ದಾಗ ನನಗೂ ರಾಮದೇವರಿಗೂ ಭೇಟಿ ಆಗಿದ್ದು. ಆದ್ದರಿಂದ ನಾನು ಇಲ್ಲಿ ಸನ್ನಿಹಿತನಾಗಿದ್ದೀನಿ. ರಾಮದೇವರ ಸನ್ನಿಧಾನಾನೂ ಇರುತ್ತೆ. ಇಲ್ಲಿ ನನ್ನ ಪ್ರತಿಷ್ಠೆ ಮಾಡು. ನಿನ್ನ ಭಕ್ತರಿಗೆ ಅನುಗ್ರಹ ಮಾಡ್ತೀನಿ ಅಂತ. ಮಾರನೆ ದಿನ ಅಲ್ಲಿಗೆ ಬಂದಾಗ ಆ ಸ್ವಪ್ನ ನೆನಪಿಗೆ ಬಂದು ಅಂಗಾರ ತಗೊಂಡು ಪ್ರಾಣದೇವರ ಮೂರ್ತಿಯನ್ನು ಬರೆದರು. ಅದಕ್ಕೆ ದ್ವಾದಶ ನಾಮಗಳನ್ನು ಹಾಕಿದ ಮೇಲೆ ಅದು ಅದೃಶ್ಯವಾಗಿ ಹೋಯಿತು. ಹೀಗೆ ಹನ್ನೆರಡು ಸಲ ಆಯಿತು. ಕೊನೆಗೆ ಯಂತ್ರ ಬರೆದು ಅದರೊಳಗೆ ಕೂಡಿಸಿದಾಗ ಕೊನೇ ಸಲ ಹಾಗೇ ಉಳಿಯಿತು. ಸ್ವಾಮಿಗಳು ಜಪಕ್ಕೆ ಕೂತುಕೊಳ್ಳುತ್ತಿದ್ದುದರಿಂದ ಪ್ರಾಣದೇವರ

Scanned by CamScanner

ಕೈಲೂ ಜಪಮಣಿ ಕೊಟ್ಟಿರು. ಜಪಮಣಿ ಕೊಟ್ಟು ಪದ್ಮಾಸನದಲ್ಲಿ ಕೂಡಿಸಿದ್ದಾರೆ. ಯಂತ್ರದ ಮಧ್ಯೆ ಇರುವುದರಿಂದ ಯಂತ್ರೋದ್ಧಾರಕ ಪ್ರಾಣದೇವರು ಅಂತ ಆಯಿತು. ಹನ್ನೆರಡು ಕೋತಿಗಳು ಹೊರಟುಹೋಗಿದ್ದರಿಂದ ಅವುಗಳನ್ನು ಕಪಿಬಂಧನ ಮಾಡಿ ಯಂತ್ರದ ಸುತ್ತಲೂ ಕೂಡಿಸಿದ್ದಾರೆ. ವಾನರಬಂಧ ಅಂದರು. ಅದರ ಸಿದ್ಧಿಗಾಗಿ 100 ಕೋಟಿ ಜಪದ ಫಲವನ್ನು ಧಾರೆ ಎರೆದಿದ್ದಾರೆ. ಹೀಗಾಗಿ ಯಂತ್ರೋದ್ಧಾರಕ ಪ್ರಾಣದೇವರು ಒಂದು ಪುಣ್ಯಕ್ಷೇತ್ರ. ಸಾವಿರಾರು ಭಕ್ತರು ಬಂದು ಸೇವೆ ಮಾಡ್ತಾರೆ. ಅನೇಕ ರಾಜಮಹಾರಾಜರು ಬಂದು ಸೇವೆ ಮಾಡ್ತಾರೆ. ಅಂತಹ ಸಿದ್ಧಿ ಕ್ಷೇತ್ರಕ್ಕೆ ರಾಯರು ನನ್ನನ್ನು ಹೋಗು ಎಂದು ಕಳಿಸಿದರು. 51ನೇ ಇಸವಿ ಪುರಂದರ ದಾಸರ ಆರಾಧನೆ ಹೊತ್ತಿಗೆ ನಾನು ಅಲ್ಲಿಗೆ ಹೋಗಿ 52ನೇ ಇಸವಿವರೆಗೂ ಒಂದು ವರ್ಷ ಅಲ್ಲಿಯೇ ಸೇವೆ ಮಾಡಿಕೊಂಡು ಇದ್ದೆ.

ಕುಮುದ : ಏನು ಮಾಡುತ್ತಿದ್ದಿರಿ ?

ವಿಷ್ಣುತೀರ್ಥ : ಜಪ ಮಾಡಿಕೊಳ್ಳುವುದು, ವಾಯುಸ್ತುತಿ ಪುನಶ್ಚರಣೆ ಮಾಡಿಕೊಳ್ಳುವುದು ಮಾಡುತ್ತಿದ್ದೆ.

ಕುಮುದ : ಅಲ್ಲಿ ದೇವಸ್ಥಾನ ಕಟ್ಟಿದ್ದಾರ?

ವಿಷ್ಣುತೀರ್ಥ : ಇಲ್ಲ.

ಕುಮುದ : ಬಂಡೆ ಮೇಲೆ ಇದೆ. ವಿಜಯನಗರದ ಅರಸು ಸಾಳವ ನರಸಿಂಹನ ಮಗ ಮುಮ್ಮಡಿ ನರಸಿಂಹ ಅನ್ನುವವನು ದೇವಸ್ಥಾನ ಕಟ್ಟಿಸಿದ. ಇಲ್ಲೇ ನಾನು ಜಪಮಾಡಿಕೊಳ್ಳುತ್ತಾ ಗುಡಿ ಒಳಗೆ ಇದ್ದೆ.

ಕುಮುದ : ಊಟ ತಿಂಡಿಗೆ ಏನು ಮಾಡುತ್ತಿದ್ದಿರಿ?

ವಿಷ್ಣುತೀರ್ಥ : ಸೇವೆಗೆ ಜನಗಳು ಬರತ್ತಿದ್ದರಲ್ಲ? ಅವರು ಪ್ರಸಾದಗಳನ್ನು ಕೊಡುತ್ತಿದ್ದರು. ಅಲ್ಲದೆ ಪ್ರಾಣದೇವರ ಪೂಜೆ ಮಾಡುತ್ತಿದ್ದ ಅರ್ಚಕರೂ ಏನಾದರೂ ಕೊಡುತ್ತಿದ್ದರು. ಶಂಕೀಪುರದ ದಾಸರು ವಾಗೀಂದ್ರದಾಸರು ಅಂತ ಬಂದರು. ಅವರ ಜೊತೆ ಒಂದು ವರ್ಷ ಇದ್ದೆ. ಆಮೇಲೆ ನನಗೆ ಇರುವುದಕ್ಕೆ ಕೆಲವು ಅನನುಕೂಲ ಆಯಿತು. ನಾನು ಏನು ಮಾಡಲಿ ಅಂತ ಪ್ರಾಣದೇವರನ್ನು ಕೇಳಿಕೊಂಡೆ. ನೀನು ನವವೃಂದಾವನಕ್ಕೆ ಹೋಗು, ಅಲ್ಲಿ ಸೇವೆ ಮಾಡು, ನಿನಗೆ ಒಳ್ಳೆಯದಾಗುತ್ತದೆ ಎಂದರು. ಮುಂದಿನ ವರ್ಷ ಪುರಂದರದಾಸರ ಆರಾಧನೆ ಸಮಯಕ್ಕೆ ಒಬ್ಬರು ಕನಕಪುರದ ಶೇಷಾಚಾರ್ ಎಂಬುವವರು ನಾನು ನಿನ್ನನ್ನು ನವವೃಂದಾವನಕ್ಕೆ ಕರೆದುಕೊಂಡು ಹೋಗುತ್ತೀನಿ ಎಂದು ನನ್ನನ್ನು ನವವೃಂದಾವನಕ್ಕೆ ಕರೆದುಕೊಂಡು ಹೋದರು. ಅಷ್ಟರಲ್ಲಿ ನವವೃಂದಾವನದ ಆರಾಧನೆಯನ್ನು ಮೂವತ್ತು ವರ್ಷಗಳಿಂದ ಮಾಡುತ್ತಿದ್ದರು ಒಬ್ಬರು.

ಕುಮುದ : ಯಾರು?

ವಿಷ್ಣುತೀರ್ಥ : ಕಾಟ್‌ಪಾಡ್ ರಾಮರಾಯರು ಅಂತ. ಅವರು ಏನೋ ಕಾರಣಾಂತರದಿಂದ ಅಲ್ಲೇ ಸೇವೆ ಮಾಡುತ್ತಾ ಇದ್ದರು. ಅವರು ಅಲ್ಲಿರುವುದು ನನಗೆ ಗೊತ್ತಿರಲಿಲ್ಲ. ಅವರು ನನ್ನನ್ನು ನೋಡಿ ಬಾರೋ ವಿಷ್ಣು ಅಂತ ಕರೆದರು. ಏನು ಇದು ವ್ಯಾಸರಾಯರೇ ಕರೀತಿದ್ದಾ

Scanned by CamScanner

ರೇನೋ ಎನ್ನಿಸಿತು. ಆಮೇಲೆ ಅವರು 21 ದಿನ ಅಲ್ಲೇ ಇದ್ದು ಅನುಭವಗಳನ್ನೆಲ್ಲ ತಿಳಿಸಿಕೊಟ್ಟರು. ಯಾವ ಯಾವ ವೃಂದಾವನಕ್ಕೆ ಹೇಗೆ ಸೇವೆ ಮಾಡಬೇಕು, ಹೇಗೆ ಪೂಜೆ ಮಾಡಬೇಕು, ಎಲ್ಲ ತಿಳಿಸಿದರು. ಅಲ್ಲದೆ ರಾತ್ರಿ ವೇಳೆ ಹೀಗೆ ಶಬ್ದಗಳಾಗುತ್ತೆ ಎಲೆ ಬಿದ್ದ ಹಾಗೆ ಆಗುತ್ತೆ, ದೂರದಿಂದ ಹೀಗೆ ಕಾಣಿಸುತ್ತೆ. ಇದಕ್ಕೆಲ್ಲ ಹೆದರಬೇಡ, ವ್ಯಾಸರಾಯರಿದ್ದಾರೆ, ಅವರು ಕಾಪಾಡುತ್ತಾರೆ, ಬೇರೆ ಯಾರೂ ಕಾಪಾಡುವುದಿಲ್ಲ. ಹೀಗೆ ಎಲ್ಲ ಹೇಳಿಕೊಟ್ಟರು. ಅಲ್ಲಿಂದ ಮುಂದೆ ಯಾವ ತೊಂದರೆಯೂ ಇಲ್ಲದೆ ಇಪ್ಪತ್ತು ವರ್ಷ. . .

ಕುಮುದ : ಮಹಾನುಭಾವರಪ್ಪ ನೀವು. ಇಪ್ಪತ್ತು ವರ್ಷ ನೀವು ಹೇಗೆ ಕಾಲ ಕಳೆದಿರಿ? ಏನು ಮಾಡುತ್ತಿದ್ದಿರಿ?

ವಿಷ್ಣುತೀರ್ಥ : ವ್ಯಾಸರಾಯರ ಪದ್ಮನಾಭತೀರ್ಥರ ಕ್ಷೇತ್ರ ಅಂದರೇನೇ ಹೆದರಿಕೆ ಆಗುತ್ತೆ.

ಕುಮುದ : ಅಲ್ಲಿ ಏನು ಮಾಡುತ್ತಿದ್ದಿರಿ?

ವಿಷ್ಣುತೀರ್ಥ : ಮೊದಲು ಆರು ವರ್ಷ ಸಂಧ್ಯಾವಂದನೆ ನರಸಿಂಹ ಮಂತ್ರ ಅಷ್ಟಮಹಾ ಮಂತ್ರ ಜಪ ಮಾಡುತ್ತಿದ್ದೆ. ಆಮೇಲೆ ಬರೀ ಜಪ ಮಾಡಿದರೆ ಸಾಲದು. 24 ಲಕ್ಷ ಗಾಯತ್ರಿ ಜಪ ಮಾಡಬೇಕು. ಇಲ್ಲ ವಾಯುಸ್ತುತಿ ಪುನಶ್ಚರಣೆ ಮಾಡು ಎಂದರು. (ಯಾರು ಹೇಳಿದರು ಸ್ಪಷ್ಟವಾಗಿ ಕೇಳಿಸುವುದಿಲ್ಲ) ಗಾಯತ್ರಿ ಜಪಕ್ಕಿಂತ ವಾಯುಸ್ತುತಿ ಪುನಶ್ಚರಣೆ ಮಾಡಬೇಕು ಅನ್ನಿಸಿತು. ಸುಮಾರು 15 ದಿನ ವಾಯುಸ್ತುತಿ ಪುನಶ್ಚರಣೆ ಮಾಡಿದೆ. 13ನೇ ದಿನ ಸ್ವಪ್ನದಲ್ಲಿ ಉತ್ತರಾಧಿಮಠದ ಸ್ವಾಮಿಗಳು ಬಂದು ಸಾಕು ನಿಲ್ಲಿಸು ಅಂದು ಶಾಂತಿಪಾಠ ಹೇಳಿಕೊಟ್ಟರು. ಇದರಿಂದ ಗಾಯತ್ರಿ ಜಪಮಾಡುವುದಕ್ಕೆ ಅನುಗ್ರಹ ಮಾಡಿದರು. ಅಲ್ಲಿಂದ ಮುಂದೆ 24 ಲಕ್ಷ ಗಾಯತ್ರಿ ಜಪ ಮಾಡಿದೆ. ಆಗ ನನ್ನ ಆಹಾರ ಕಡಲೆಕಾಳು ಅಥವಾ ಹೆಸರುಕಾಳು ನೆನೆಹಾಕಿಕೊಂಡು ಅದನ್ನು ಸೇವಿಸುತ್ತಿದ್ದೆ. ಆಗ ಮೈಯಲ್ಲಿ ಶಕ್ತಿ ಇದ್ದದ್ದರಿಂದ ನವವೃಂದಾವನಗಳಿಗೂ ಅಭಿಷೇಕ ಮಾಡಿ ಮಧ್ಯಾಹ್ನದ ಮೇಲೆ ಜಪಕ್ಕೆ ಕೂತುಕೊಳ್ಳುತ್ತಿದ್ದೆ. ಬೇಕಾದಷ್ಟು ಹೊತ್ತು ಇದ್ದಿದ್ದರಿಂದ ಜಪ ಮಾಡುವುದಕ್ಕೆ ಅನುಕೂಲವಾಗುತ್ತಿತ್ತು.

ಕುಮುದ : ಋಷಿಗಳು ತಪಸ್ಸು ಮಾಡುತ್ತಿದ್ದರಂತಲ್ಲ ಹಾಗೇ ನೀವೂ ಕೂತುಬಿಡುತ್ತಿದ್ದಿರಿ ಅಂತ ಕಾಣುತ್ತೆ.

ವಿಷ್ಣುತೀರ್ಥ : ಎಲ್ಲ ಅವರು ಶಕ್ತಿ ಕೊಟ್ಟಿದ್ದರು, ನಡೆಯಿತು. ಈಗ ಮೂರು ಗಂಟೆ ಕೂತರೆ ಸೊಂಟ ನೋವು ಬರುತ್ತೆ.

ಕುಮುದ : ವಯಸ್ಸು. ಒಳ್ಳೆ ಚೆನ್ನಾಯಿತೆ?

ವಿಷ್ಣುತೀರ್ಥ : ನೂರು ಗಾಯತ್ರಿ ಜಪ ಆದಮೇಲೆ ಬಾಳಾಚಾರ್ ಎಂಬುವರು ಭಾಗವತ ಪಾರಾಯಣ ಮಾಡಿ ಅಂತ ಅಂದರು. ಎಲ್ಲನೂ ಮಾಡೋದು ಆಗಲ್ಲ, 7ನೇ ಸ್ಕಂದ ಪ್ರಹ್ಲಾದ ಚರಿತ್ರೆ ಆರಿಸಿಕೊಂಡು ಪಾರಾಯಣ ಮಾಡ್ತಾ ಹೋದೆ. 80ನೇ ಇಸವಿ ಒಂದು ದಿನ ಒಂದು ಸೂಚನೆ ಆಯಿತು. ಬೆಳಗ್ಗೆ ಪೂಜೆ ಮಾಡಿ ಹೋದರೆ ಸುಮಾರು 10 ಗಂಟೆ ಹೊತ್ತಿಗೆ ಸಾವಿರಾರು ಕಾಗೆಗಳು ಕಾಕಾಕಾ ಅಂತ 15 ನಿಮಿಷ ಹಾರಾಡಿ ಹೊರಟು ಹೋಗುತ್ತಿದ್ದವು. ಪುನಃ ಸಾಯಂಕಾಲ ಸಂಧ್ಯಾವಂದನೆ ಮಾಡಿಕೊಂಡು ಬಂದಾಗ ಮತ್ತೆ ಸಾವಿರಾರು ಕಾಗೆಗಳು

Scanned by CamScanner

ಕಾಕಾಕಾ ಅಂತ 15 ನಿಮಿಷ ಹಾರಾಡಿ ಹೊರಟು ಹೋಗುತ್ತಿದ್ದವು.

ಕುಮುದ : ಸ್ವಪ್ನದಲ್ಲೇ?

ವಿಷ್ಣುತೀರ್ಥ : ನಿಜವಾಗಿಯೂ ಬಂದು ಹೋಗುತ್ತಿದ್ದವು. ಯಾಕೆ ಹೀಗೆ ಮಾಡುತ್ತಿವೆ ಎಂದು ಯೋಚನೆ ಆಯಿತು. ಕೊನೆಗೆ ಒಂದು ದಿನ ದೇವರು ಪೂಜೆ ಮಾಡುತ್ತಿದ್ದಾಗ ಅನ್ನ ಶಾಂತಿ ಆಗಿಲ್ಲ, ಅದಕ್ಕೆ ಹೀಗೆ ಕಾಗೆಗಳು ಬಂದು ಕೂಗಿ ಹೋಗುತ್ತಿವೆ ಎನ್ನಿಸಿತು. ಆಗ ನಾನು ವ್ಯಾಸರಾಯರಲ್ಲಿಗೆ ಹೋಗಿ ಕೇಳಿದೆ, ನಾನು ಬಂದಾಗಲೇ ನಿಮ್ಮ ಮುಂದೆ ಹೇಳಿ ಕೊಂಡಿದ್ದೆ. ನನ್ನ ಬಳಿ ದುಡ್ಡು ಏನೂ ಇಲ್ಲ. ನಾನು ಏನು ಸೇವೆ ಮಾಡಬೇಕು ಹೇಳಿ. ನನಗೇ ಊಟಕ್ಕೂ ಗತಿ ಇಲ್ಲದಾಗ ಅನ್ನ ಶಾಂತಿ ಹೇಗೆ ಮಾಡಲಿ ಎಂದೆ. ಆಗ ಸ್ವಾಮಿಗಳು ಆಗಲಪ್ಪ, ನೀನು ಏನೂ ಯೋಚನೆ ಮಾಡಬೇಡ, ನಾವೆಲ್ಲ ನೋಡಿಕೋತೇನೆ, ಎಂದರು. ಮಾರನೇ ದಿನದಿಂದ ಆ ಕಾಗೆಗಳು ಬರುವುದು ನಿಂತು ಹೋದವು.

ಕುಮುದ : ಆಶ್ಚರ್ಯ!

ವಿಷ್ಣುತೀರ್ಥ : ಆಮೇಲೆ ನನ್ನ ತಮ್ಮ ಬಂದ. ಅವನು ನಾನು ವಿಚಾರ ಮಾಡಿ ಕಾರ್ತೀಕ ಮಾಸದಲ್ಲಿ ಮಂಗಳ ಮಾಡೋಣ ಅಂತ ನಿಶ್ಚಯ ಮಾಡಿದೆವು. ಆಮೇಲೆ ರಾಯರ ಮುಂದೆ ಹೋಗಿ ಏನೋ ಸ್ವಾಮಿ ನಮ್ಮ ಹತ್ತಿರ ದುಡ್ಡಿಲ್ಲ. ಮಂಗಳ ಮಾಡಲು ಹೊರಟಿದ್ದೀವಿ. ಏನೋ ಆಯಿತು, ಏನೋ ಮಾಡಿದೆವು ಅಂತ ಆಗಬಾರದು. ಅಮಂಗಳ ಆಗಬಾರದು ಅಂದೆ. ನೀನೇನೂ ಯೋಚನೆ ಮಾಡಬೇಡ, ನಾವು ನೋಡಿಕೊಳ್ಳುತ್ತೀವಿ. ಪ್ರಕಟಯ ಉದ್ಘೋಷಯಃ ಅಂದರು.

ಕುಮುದ : ಹಾಗಂದರೆ?

ವಿಷ್ಣುತೀರ್ಥ : ಎಲ್ಲರಿಗೂ ತಿಳಿಸಿ ಮಾಡು, ಮುಚ್ಚುಮರೆ ಮಾಡಬೇಡ ಎಂದರು. ಆದ್ದರಿಂದ ನೂರಾರು ಕರಪತ್ರಿಕೆ ಹಂಚಿ ಕೆಲಸ ಶುರು ಮಾಡಿದೆವು. ಹುಣ್ಣಿಮೆ ದಿವಸ ಮಂಗಳ ಇದ್ದಿದ್ದು. ಏಕಾದಶಿ ದಿನ ನನ್ನ ಹತ್ತಿರ 5 ರೂ. ಸಹ ಇರಲಿಲ್ಲ. ಹೇಗಪ್ಪ ಮಾಡೋದು ಅಂದುಕೊಂಡೆ. ಯಾರನ್ನೋ ಸಾಲ ಕೇಳಿದೆ, 500 ರೂ. ಕೊಡ್ತೀನಿ ಶುರು ಮಾಡು ಅಂದರು. (ಇಲ್ಲಿ ಮಾತು ಸ್ಪಷ್ಟವಾಗಿಲ್ಲ) ನಾನು ಸಪ್ಪೆ ಮುಖ ಹಾಕಿಕೊಂಡು ಬಂದೆ. ಅದನ್ನು ನೋಡಿ ಆತ್ಮೀಯ ಬಂಧುಗಳಂತೆ ಇದ್ದ ಕೃಷ್ಣಮೂರ್ತಿ ಎಂಬುವವರು, ಒಬ್ಬರು ಕೋದಂಡರಾಮ ಅಂತ, ಅನ್ನಪೂರ್ಣ, ಹನುಮಕ್ಕ, ಕೋದಂಡರಾಮರ ಹೆಂಡತಿ ಜಾನಕಮ್ಮ ಇಷ್ಟು ಜನರು ಕೇಳಿದರು, ಯಾಕೆ ಬಂದಿರಿ? ಏನಾಯಿತು? ಎಂದು ಕೇಳಿದರು. ನಾನು ಎಲ್ಲ ಹೇಳಬೇಕಾಯಿತು. ಆಗ ಅವರು ತಮ್ಮ ಕುತ್ತಿಗೆಯಲ್ಲಿ ಇದ್ದ ಚಿನ್ನದ ಸರ ತೆಗೆದು ಕೊಟ್ಟು ಇದನ್ನು ಉಪಯೋಗಿಸಿ ಕೊಳ್ಳಿ ಎಂದರು. ನಿಮ್ಮ ಸರ ಉಪಯೋಗಿಸಿ ಮಂಗಳ ಮಾಡುವ ಆಸೆ ಇಲ್ಲ. ಎಲ್ಲ ನಾನು ನೋಡಿಕೊಳ್ಳುತೀನಿ ಎಂದು ಗುರುಗಳು ಹೇಳಿದ್ದಾರೆ. ನಾನು ನಿಶ್ಚಿಂತೆಯಿಂದ ಇದ್ದೀನಿ, ಎಂದೆ. ಆಗ ಅವರು 500 ರೂ. ತಂದುಕೊಟ್ಟರು. ಅದನ್ನು ತಗೊಂಡು ಅಂಗಡಿಗೆ ಹೋಗಿ ಕೇಳಿದರೆ 500 ರೂ. ಬೇಡ, 50 ರೂ. ಅನುಗ್ರಹ ಆಶೀರ್ವಾದ ಅಂತ ತಗೊಂಡಿದ್ದೀನಿ ಎಂದು ನಿಮಗೆ ಏನು ಸಮಾನಾಗಬೇಕೊ ಎಷ್ಟು ಬೇಕೋ ತಗೊಳ್ಳಿ ಅಂದರು. ಸಾವಿರ ರೂಪಾಯಿ

Scanned by CamScanner

ಸಾಮಾನು ಕೊಟ್ಟರು ಈ ಕಡೆ ಕೆಲವರು ಹಾಲನ್ನು ಮೊಸರನ್ನು ತಪ್ಪದೆ ತಂದುಕೊಡುತೀವಿ ಅಂದರು. 6 ಡಬ್ಬ ತುಪ್ಪ ತಂದುಕೊಟ್ಟರು. ಅಡಿಗೆಯವರಿಗೆ ಹೇಳಿದಾಗ 70 ಸೇರು ರವೆಗೆ ಮಂಡಿಗೆ ಮಾಡಿಕೊಂಡು ಬಂದರು. ಹೀಗಾಗಿ ಅವತ್ತಿನ ದಿನ 800 ಜನಕ್ಕೆ ಮಂಡಿಗೆ ಪ್ರಸಾದ ಆಯಿತು.

ಕುಮುದ : ಮಂಗಳ ಎಷ್ಟು ದಿನ ಮಾಡಿದಿರಿ?

ವಿಷ್ಣುತೀರ್ಥ : ಒಂದು ದಿನ ಮಂಗಳ, ಮಾರನೆ ದಿನ ಮುಕ್ತಾಯ (ಸ್ಪಷ್ಟವಾಗಿಲ್ಲ ಮಾತು). ಆ ಎರಡು ದಿನದಿಂದ ಆಗಿನ ಕಾಲಕ್ಕೆ 7-8 ಸಾವಿರ ರೂಪಾಯಿ ಖರ್ಚಾಯಿತು. ಹ್ಯಾಗೊ ದುಡ್ಡು ಒದಗಿತು. ನಮಗೆ ಕಷ್ಟ ಆಗಲಿಲ್ಲ. ಅಂಗಡಿಯವರದು ಒಂದು ಸಾವಿರ ರೂಪಾಯಿ ಬಾಕಿ ಇತ್ತು. ಆಮೇಲೆ ನನ್ನ ತಮ್ಮ ಬೆಂಗಳೂರಿಗೆ ಬಂದು ಅಷ್ಟು ಹಣ ಕಳಿಸಿದ. ಅದರಿಂದ ಅಂಗಡಿಯವನಿಗೆ ತುಂಬ ಅನುಕೂಲ ಆಯಿತಂತೆ. ಮುಂದೆ ಮನೆ ಕಟ್ಟಿಸಲು ಅನುಕೂಲವಾಗಿ ಇವತ್ತಿನವರೆಗೂ ನೆನೆಸಿಕೊಳ್ಳುತ್ತಾನೆ. ಹೀಗೆ ವ್ಯಾಸರಾಯರ ಅನುಗ್ರಹದಿಂದ ಮಂಗಳ ಕಾರ್ಯಕ್ರಮ ಚೆನ್ನಾಗಿ ನಡೆಯಿತು. ಆಗ ನನ್ನ ತಮ್ಮನ ಹೆಂಡತಿ ಪದ್ಮಾವತಿ ಗರ್ಭಿಣಿ ಆಗಿದ್ದಳು. ನೀನೂ ಬಾ ಎಂದೆ, ಬಂದಿದ್ದಳು. ವ್ಯಾಸರಾಯರ ದರ್ಶನ ಆಗಿದ್ದರಿಂದ ಆಗ ಹುಟ್ಟಿದ ಕೊನೆ ಮಗನಿಗೆ ವ್ಯಾಸತೀರ್ಥ ಎಂದು ಹೆಸರಿಟ್ಟರು. ಅವನು ಈಗ ಅಡ್ವೊಕೇಟ್ ಆಗಿದ್ದಾನೆ. ಇಷ್ಟು ವಿಷಯ.

ಕುಮುದ : ನವವೃಂದಾವನ ಅನ್ನುವುದು ಒಂದು ದ್ವೀಪ ಅಂತ ಹೇಳ್ತಾರಲ್ಲ? ಅಲ್ಲಿ ಯಾರೂ ಇರೊಲ್ಲ ಅಂತಾರೆ. ನೀನು ಹೇಗೆ ಇದ್ದಿರಿ?

ವಿಷ್ಣುತೀರ್ಥ : ತುಂಗಭದ್ರ ನದಿ ಮಧ್ಯೆ ಒಂದು ಗುಡ್ಡ ಇದ್ದಹಾಗೆ ಇದೆ. ಹೀಗಾಗಿ ನಡುಗಡ್ಡೆ ಆಗಿದೆ. ಈ ಗುಡ್ಡದ ಹಿಂಭಾಗದಲ್ಲಿ ದೊಡ್ಡ ಬಯಲಿದೆ. ಈ ಬಯಲಿನಲ್ಲಿ ಪದ್ಮನಾಭತೀರ್ಥರು, ವಾಲ್ಮೀಕಿತೀರ್ಥರು, ವ್ಯಾಸರಾಯರು, ರಘುನಂದನರು, ಶ್ರೀನಾಥ ತೀರ್ಥರು, ರಾಮತೀರ್ಥರು, ಶಿಲೀಂದ್ರ ಸ್ವಾಮಿಗಳು, ಹೀಗೆ 9 ಜನ ಸ್ವಾಮಿಗಳ ವೃಂದಾವನ ವಿದೆ. ಅದಕ್ಕೆ ನವವೃಂದಾವನ ಎಂದು ಹೆಸರು. ಆಗಿನ ಕಾಲದಿಂದ ಓಪನ್ ಏರ್‌ನಲ್ಲಿ ಇದೆ.

ಕುಮುದ : ಅಷ್ಟು ವೃಂದಾವನಗಳಿಗೂ ಅಭಿಷೇಕ ಮಾಡುತ್ತಿದ್ದಿರಾ?

ವಿಷ್ಣುತೀರ್ಥ : ಅಷ್ಟಕ್ಕೂ ಮಾಡುತ್ತಿದ್ದೆ. ಆಗಲೇ ಹೇಳಿದೆನಲ್ಲ 20 ವರ್ಷ ಅಂತ.

ಕುಮುದ : ನಿಮಗೆ ಬೇಜಾರು ಆಗುತ್ತಿರಲಿಲ್ಲವೆ?

ವಿಷ್ಣುತೀರ್ಥ : ಬೇಜಾರು ಆಗೋ ಹೆಸರೇ ಇಲ್ಲ.

ಕುಮುದ : ಆಮೇಲೆ ಏನು ಮಾಡಿದಿರಿ?

ವಿಷ್ಣುತೀರ್ಥ : ನವವೃಂದಾವನದಲ್ಲಿದ್ದಾಗ ಸ್ಮಾರ್ತ ಸ್ವಾಮಿಗಳ ಪರಿಚಯ ಆಯಿತು. ಕೂಡಲಿ ಸ್ವಾಮಿಗಳು ನಿಮ್ಮ ಸಹಾಯ ನಮಗೆ ಬೇಕಪ್ಪ ಅಂದರು. ಹಾಗಾಗಿ ನಾನು ನವ ವೃಂದಾವನ ಬಿಟ್ಟು ಕೂಡಲಿಗೆ ಬಂದೆ. ಹದಿನಾರು ವರುಷ ಅವರ ಜೊತೆಯಲ್ಲಿದ್ದೆ. ಆಮೇಲೆ ಮಠದವರು ನನ್ನನ್ನು ಬಿಟ್ಟುಕೊಟ್ಟರು. ನಾನು ಈ ಕಡೆ ಬಂದೆ. ವಾಯುಸ್ತುತಿ ಬರೆಯಲು

Scanned by CamScanner

ಪ್ರಾರಂಭ ಮಾಡಿಕೊಂಡಿದ್ದೆ. ಆಮೇಲೆ ಪುರುಷಸೂಕ್ತ ಬರೆಯಲು ಪ್ರಾರಂಭಿಸಿದೆ.

ಕುಮುದ : ವಾಯುಸ್ತುತಿಗೆ ಬೇರೆಯವರ ವ್ಯಾಖ್ಯಾನ ಕೊಟ್ಟಿದ್ದೀರಾ?

ವಿಷ್ಣುತೀರ್ಥ : ಮುಖ್ಯವಾಗಿ ಎರಡು ವ್ಯಾಖ್ಯಾನ ಇದೆ. ಒಂದು ವಿಶ್ವೇಶ್ವರತೀರ್ಥರದು, ಇನ್ನೊಂದು ಛಾಯಾಶಂಕರಾಚಾರ್ಯ ಎಂಬುವರದು ಮುಖ್ಯ. ಪುಂಗನೂರು ರಾಘವೇಂದ್ರಾಚಾರ್ ಎಂಬುವವರ ಕನ್ನಡ ವ್ಯಾಖ್ಯಾನ. ಹರಿಪರವಾಗಿ ವಾಯುಪರವಾಗಿ ಎರಡು ಅರ್ಥ ಬರೆದಿದ್ದಾರೆ. ಅವನ್ನೆಲ್ಲ ಸೇರಿಸಿಕೊಂಡು ಬರಿತಾ ಹೋದೆ.

ಕುಮುದ : ಹಾಗೇ ನಿಮ್ಮ ಸ್ವಂತದ್ದೂ ಇದೆ.

ವಿಷ್ಣುತೀರ್ಥ : ಅದೂ ಬೇಕಾದಷ್ಟಿದೆ.

ಕುಮುದ : ನವವೃಂದಾವನದಲ್ಲಿದ್ದಾಗ ಬೆಳಗ್ಗೆ ಎದ್ದು ಅಭಿಷೇಕ, ಪೂಜೆ, ಜಪದಲ್ಲಿದ್ದಿರಿ. ಆಮೇಲೆ ಕೂಡಲಿಗೆ ಬಂದಿರಿ, ನಿಮಗೆ ಇವನ್ನೆಲ್ಲ ಅಭ್ಯಾಸ ಮಾಡಲು ಹೇಗೆ ಸಮಯ ಇರುತ್ತಿತ್ತು?

ವಿಷ್ಣುತೀರ್ಥ : ಸಮಯ ಬಂದಾಗ ಅಧ್ಯಯನ ಮಾಡುತ್ತಿದ್ದೆ.

ಕುಮುದ : ಆದರೆ ಆ ಪುಸ್ತಕಗಳನ್ನೆಲ್ಲ ತಗೊಂಡು ಓದಿಕೊಳ್ಳುತ್ತಿದ್ದಿರಾ?

ವಿಷ್ಣುತೀರ್ಥ : ಹೌದು.

ಕುಮುದ : ಅಷ್ಟು ವರ್ಷದಿಂದ ಈ ಸ್ಕ್ರಿಪ್ಟ್‌ಗಳನ್ನು ಹೇಗೆ ಕಾಪಾಡಿಕೊಂಡು ಬಂದಿರಿ?

ವಿಷ್ಣುತೀರ್ಥ : ವಾಯುಸ್ತುತಿಗೆ ಅಷ್ಟೇನೂ ಕಷ್ಟ ಆಗಲಿಲ್ಲ. ಬರೆದು ಬರೆದ ಹಾಗೆ ಶ್ರೀಶಮೂರ್ತಿಗಳಿಗೆ ಕೊಟ್ಟುಬಿಡುತ್ತಿದ್ದೆ. ಪುರುಷಸೂಕ್ತದ ಸ್ಕ್ರಿಪ್ಟ್ ನನ್ನ ಹತ್ತಿರವೇ ಇಟ್ಟುಕೊಳ್ಳುತ್ತಿದ್ದೆ. ಕಾಪಾಡುವುದು ಕಷ್ಟವಾಗುತ್ತಿತ್ತು. ಬರ್‍ತಾ ಬರ್‍ತಾ ನನ್ನ ಅಕ್ಷರ ವ್ಯತ್ಯಾಸ ಆಗ್ತಾ ಬಂತು. ಅದನ್ನ ಇನ್ನೊಂದು ಸಲ ಬರೀಬೇಕಾಗಿ ಬಂತು. ಅದೆಲ್ಲ ನಿಮಗೆ ಗೊತ್ತೇ ಇದೆ.

ಕುಮುದ : ನಿಮಗೆ ಯಾವಾಗಲೂ ದೇವರ ಬಗ್ಗೆ ಚಿಂತನೆ ಮಾಡ್ತಾ ಇರೋ ಹಾಗೆ ಒಲವು ಯಾಕೆ ಬಂತು?

ವಿಷ್ಣುತೀರ್ಥ : ನನಗೆ ಮದುವೆ ಪ್ರಸ್ತಾಪ ಬಂದಾಗಲೆಲ್ಲ ಒಂದೊಂದು ಅನುಭವ. ಅದೇ ನನಗೆ ದೇವರ ಕಡೆಗೆ ಒಲವು ಬರಲು ಕಾರಣ ಆಯಿತು.

ಕುಮುದ : ಚಿಕ್ಕಂದಿನಿಂದಲೂ ದೇವರ ಕಡೆ ಒಲವು ಇತ್ತು.

ವಿಷ್ಣುತೀರ್ಥ : ನಮ್ಮ ತಂದೆಗೆ ಮೂರು ಜನ ಗಂಡು ಮಕ್ಕಳು. ನಮ್ಮ ಅಣ್ಣ ಮತ್ತು ತಮ್ಮ ಇಬ್ಬರೂ ಲೌಕಿಕದಲ್ಲಿ ಇದ್ದರು. ನಾನು ಒಬ್ಬನೇ ಆದೆ. ಅಲ್ಲದೆ ನಾನು ಬೆಂಗಳೂರಿನಲ್ಲಿದ್ದು ಬಾಕಿ ಕೆಲಸ ಮಾಡಿಕೊಳ್ಳುತ್ತಿದ್ದರೂ ಸತ್ಯಧ್ಯಾನತೀರ್ಥರ ಅನುಗ್ರಹದಿಂದ ವೇದಾಂತವನ್ನು ಅಭ್ಯಾಸ ಮಾಡುವ ಮನಸ್ಸಾಯಿತು. ನನಗೆ ಪಾಠ ಹೇಳಿಕೊಟ್ಟವರು ಶ್ರೀ ಮಾಧವಾಚಾರ್. ಏಳು ವರ್ಷ ಅವರ ಬಳಿ ಅಧ್ಯಯನ ಮಾಡಿದೆ. ಈ ವಿಚಾರ ಇಂಥಾದ್ದರಲ್ಲಿದೆ, ಈ ವಿಚಾರ ನ್ಯಾಯಾಂಗದಲ್ಲಿದೆ, ಈ ವಿಚಾರ ಇಂಥಾದ್ದರಲ್ಲಿದೆ ಎಂದು ಹೇಳುತ್ತಿದ್ದರು. ಎಲ್ಲ ಗ್ರಂಥಗಳನ್ನು ಸಮಗ್ರವಾಗಿ ಓದಲು ಸಾಧ್ಯವಾಗದಿದ್ದರೂ ಸ್ವಲ್ಪ ವಿಷಯ ತಿಳಿದ ಹಾಗಾಯಿತು. ಆಮೇಲೆ ನಾನು ಮಂತ್ರಾಲಯಕ್ಕೆ ಹೋದೆ. ಅವರೂ ಬೇರೆ ಕಡೆ ಹೊರಟು ಹೋದರು.

Scanned by CamScanner

ಸತತ ಅಧ್ಯಯನ ಮತ್ತು ಗುರುಗಳ ಅನುಗ್ರಹದಿಂದ ಎಲ್ಲ ವಿಚಾರಗಳೂ ತಿಳಿಯಿತು.

ಕುಮುದ : ಭಕ್ತ ದೇವರ ಜೊತೆ ಮಾತಾಡುತ್ತಿದ್ದ, ತಾಯಿ ಎದುರಿಗೆ ಮಗು ಹೇಳಿಕೊಂಡ ಹಾಗೆ. ನೀವು ವ್ಯಾಸರಾಯರೊಂದಿಗೆ ಹೇಳಿಕೊಳ್ಳುತ್ತಿದ್ದಿರಿ ಎನ್ನಿಸುತ್ತೆ.

ವಿಷ್ಣುತೀರ್ಥ : ಅದರಲ್ಲೇನೂ ಸಂದೇಹವಿಲ್ಲ. ಕಾಗೆಗಳು ಬಂದಾಗ ನಾನು ಹಾಗೆ ಅವರ ಜೊತೆ ಮಾತಾಡಿದೆ. ನನ್ನ ಮನಸ್ಸಿನಲ್ಲಿ ವ್ಯಾಸರಾಯರು ಪ್ರತ್ಯಕ್ಷವಾಗಿ ಇದ್ದಾರೆ ಎಂದೇ ಭಾವನೆ. ನಾವು ಅಯೋಗ್ಯರಾಗಿರುವುದರಿಂದ ಅವರು ನಮಗೆ ಕಾಣಿಸುತ್ತಿಲ್ಲ ಅಷ್ಟೆ ಎಂದು ತಿಳಿದಿದ್ದೆ. ಹಾಗಾಗಿ ನನಗೆ ಕಷ್ಟ ಆದಾಗಲೆಲ್ಲ ನಾನು ಹೇಳಿಕೊಳ್ಳುತ್ತಿದ್ದೆ. ಆಗ ಅವರು ಸೂಚನೆಗಳನ್ನು ಕೊಟ್ಟು ನನ್ನ ಕಷ್ಟ ಪರಿಹಾರ ಮಾಡುತ್ತಿದ್ದರು.

ಕುಮುದ : ಇದನ್ನೆಲ್ಲ ಕೇಳುವುದಕ್ಕೆ ತುಂಬ ಸಂತೋಷ ಆಗುತ್ತೆ. ಮಹಾನುಭಾವರು ಸಶರೀರರಾಗಿ ಇದ್ದು ಅನುಗ್ರಹಿಸದೇ ಇದ್ದರೂ ಸೂಕ್ಷ್ಮ ಶರೀರದಲ್ಲಿದ್ದು ಅನುಗ್ರಹ ಮಾಡುತ್ತಾರೆ ಎಂದು ನನ್ನ ಅನುಭವಕ್ಕೂ ಬಂದಿದೆ. ಆದ್ದರಿಂದ ನೀವು ಹೇಳುವುದರಲ್ಲಿ ಏನೂ ಉತ್ಪ್ರೇಕ್ಷೆ ಇಲ್ಲ ಅನ್ನಿಸುತ್ತೆ. ಆಮೇಲೆ ದೇವರುಗಳನ್ನೆಲ್ಲ ಇಟ್ಟುಕೊಂಡು ಎಷ್ಟು ವರ್ಷಗಳಿಂದ ಹೀಗೆ ಓಡಾಡುತ್ತಿದ್ದೀರಿ?

ವಿಷ್ಣುತೀರ್ಥ : ಯಾರೋ ಒಬ್ಬರು ಒಂದು ಸಾಲಿಗ್ರಾಮ ತಂದು ಕೊಟ್ಟರು, ಆಮೇಲೆ ಇನ್ನು ಯಾರ‍್ಯಾರೋ ಸಾಲಿಗ್ರಾಮ ಕೊಟ್ಟರು. ನವವೃಂದಾವನದಲ್ಲಿ ಎರಡು ಸಾಲಿಗ್ರಾಮ ಸಿಕ್ಕಿತು. ಆಮೇಲೆ ಉತ್ತರಾದಿಮಠದ ಸ್ವಾಮಿಗಳು ನಾನು ಪೂಜೆ ಮಾಡುತ್ತಿದ್ದುದನ್ನು ನೋಡಿ ಅವರೂ ಎರಡು ಸಾಲಿಗ್ರಾಮ ಕೊಟ್ಟರು. ಹೀಗಾಗಿ ಸಾಲಿಗ್ರಾಮಗಳು ಜಾಸ್ತಿ ಆದವು. ಸಾಮಾನ್ಯವಾಗಿ ಎಲ್ಲ ಸಾಲಿಗ್ರಾಮಕ್ಕೂ ನಿತ್ಯ ಪೂಜೆ ಮಾಡುತ್ತಿದ್ದೆ. ಅವಸರವಿದ್ದಾಗ ಸಣ್ಣ ಪೆಟ್ಟಿಗೆಯ ದೇವರಿಗೆ ಮಾತ್ರ ಪೂಜೆ ಮಾಡುತ್ತಿದ್ದೆ.

ಕುಮುದ : ನಿಮಗೆ ವಿಷ್ಣುತೀರ್ಥರೆಂದು ಹೆಸರು ಇಡಲು ಕಾರಣ ಏನು ಅಂತ ಹೇಳಿದ್ದಿರಿ. ಅದನ್ನು ಹೇಳಿ.

ವಿಷ್ಣುತೀರ್ಥ : ನಮ್ಮ ತಂದೆ ವೆಂಕಟರಮಣಯ್ಯ. ಅವರಿಗೆ ಒಬ್ಬರು ಚಿಕ್ಕಪ್ಪ ಇದ್ದರು. ಅವರೂ ವೆಂಕಟರಮಣಯ್ಯ. ನಮ್ಮ ತಾತ ಅಮಲ್ದಾರ್ ಆಗಿದ್ದರು. ಆದ್ದರಿಂದ ಅಮಲ್ದಾರ್ ವೆಂಕಟರಮಣಯ್ಯ ಅಂತ. ನಾನು ಹುಟ್ಟಿದ ದಿನ ನಮ್ಮ ತಂದೆ ನಮ್ಮ ತಾತನಿಗೆ ಮಗ ಹುಟ್ಟಿದ ವಿಷಯ ತಿಳಿಸಿದರಂತೆ. ಆಗ ಅವರು ಮಧ್ವವಿಜಯದಲ್ಲಿ ಮಧ್ವಾಚಾರ್ಯರ ತಮ್ಮ ವಿಷ್ಣುತೀರ್ಥರ ಬಗ್ಗೆ ಓದುತ್ತಿದ್ದರಂತೆ. ಒಳ್ಳೆ ಸಮಯಕ್ಕೆ ಬಂದಿದ್ದೀಯೆ. ನಿನ್ನ ಹೆಂಡತಿ ನರಸಮ್ಮನೂ ವಿಷ್ಣು ಪಂಚಕ ಮಾಡಿದ್ದಾಳೆ. ಅದಕ್ಕೆ ಆ ಮಹಾನುಭಾವರಾದ ವಿಷ್ಣುತೀರ್ಥರ ಹೆಸರನ್ನೇ ಇಡು, ಇವನೂ ಅವರಂತೆ ಯೋಗಿ ಆಗ್ತಾನೆ. ವಿಷ್ಣುಭಕ್ತನಾಗುತ್ತಾನೆ ಎಂದರಂತೆ.

ಕುಮುದ : ಹಿರಿಯರು ಆಡಿದ ಮಾತು ಅಕ್ಷರಶಃ ನಿಜವಾಗುತ್ತೆ ಎಂದು ನನ್ನ ನಂಬಿಕೆ. ಅದೇ ತರಹ ನಿಮ್ಮ ಜೀವನದಲ್ಲೂ ನಡೆದಿದೆ. ಆಮೇಲೆ ಮಧ್ವಾಚಾರ್ಯರು ತಮ್ಮ ವಿಷ್ಣುತೀರ್ಥರಿಗೆ ಹೇಳಿ ವಾಯುಸೂಕ್ತ ಪುರುಷಸೂಕ್ತ ವ್ಯಾಖ್ಯಾನ ಬರೆಯುವುದಕ್ಕೆ ಹೇಳಿದ್ದರಂತೆ. ಅವರು ಬರೀಲಿಲ್ಲ ಅಂತ ಕೇಳಿದೀನಿ.

Scanned by CamScanner

ವಿಷ್ಣುತೀರ್ಥ : ಹಾಗೇನೂ ಇಲ್ಲ. ವಿಷ್ಣುತೀರ್ಥರು ಬೇಕಾದ ಹಾಗೆ ಬರೆದಿದ್ದಾರೆ. ನನಗೆ ಆ ಗ್ರಂಥ ಸಿಕ್ಕಿಲ್ಲ. ಆ ವಿಷ್ಣುತೀರ್ಥರ ಅನುಗ್ರಹದಿಂದಲೇ ನಾನು ಒಬ್ಬ ವಿಷ್ಣುತೀರ್ಥ ಆಗಿದ್ದಿನಿ. ತೀರ್ಥ ಅಂದರೆ ಶಾಸ್ತ್ರ. ವಿಷ್ಣುವಿನ ಶಾಸ್ತ್ರದಲ್ಲಿ ಒದ್ದಾಡುತ್ತಿದ್ದೀನಿ.

ಕುಮುದ : ನೀವು ಏನೇನು ಗ್ರಂಥಗಳನ್ನು ಬರೆದಿದ್ದೀರಾ?

ವಿಷ್ಣುತೀರ್ಥ : ವಾಯುಸ್ತುತಿ ಪುರುಷಸೂಕ್ತ ಆಮೇಲೆ ನಮ್ಮ ಸ್ನೇಹಿತರು ಅಣುಭಾಷ್ಯ ಬರೀರಿ ಅಂದರು. ಅದನ್ನು ಬರೆದೆ. ಇನ್ನೂರು ಪೇಜಿನಷ್ಟು ಆಯಿತು. ಅದನ್ನು ಅಲ್ಲಿಗೇ ನಿಲ್ಲಿಸಿದೆ. ಪ್ರಭಂಜನಾಚಾರ್ ಎಂಬುವರು ನೋಡಿ ತಿದ್ದಿದ್ದಾರೆ. ಅದನ್ನು ಬರೀಬೇಕು ಅಂತ ಇದ್ದೀನಿ. ಆಮೇಲೆ ನನ್ನ ತಂಗಿ ಸುಂದರಕಾಂಡ ಬರೆದು ಕೊಡು ಅಂದಳು. ಅದನ್ನು ಬರೆದೆ. ಇನ್ನೊಬ್ಬರು ಶ್ರೀಸೂಕ್ತದ ಅರ್ಥ ಬರೆದು ಕೊಡಿ ಅಂದರು. ಅದನ್ನು ಬರೆದೆ. ಮನ್ಯುಸೂಕ್ತದ ಅರ್ಥ ಬರೆದೆ. ಹೀಗೆ ಒಂದೊಂದಾಗಿ ಬರಿತಾ ಹೋದೆ.

ಕುಮುದ : ಅಷ್ಟಮಹಾಮಂತ್ರ ಅಂತ ಬೇರೆ ಬರೆದಿರಬೇಕು ಅಲ್ಲವೆ?

ವಿಷ್ಣುತೀರ್ಥ : ಈಗ ಎರಡು ವರ್ಷದ ಹಿಂದೆ ನಮ್ಮ ಸ್ನೇಹಿತರು ಬಾಬೂರಾಯರು ಅಂತ, ಅವರು ಅಷ್ಟಮಹಾಮಂತ್ರ ಬರೆದು ಕೊಟ್ಟರೆ ನಮ್ಮ ಸಂಘದಿಂದ ಪ್ರಕಟನೆ ಮಾಡುತ್ತೀವಿ ಅಂದರು. ಅದನ್ನು ಬರೆದೆ ಅಷ್ಟಮಹಾಮಂತ್ರ ಅಂದರೆ, 1. ಪ್ರಣವಮಂತ್ರ 2. ನಾರಾಯಣ ಅಷ್ಟಾಕ್ಷರ ಮಂತ್ರ, 3. ವ್ಯಾಹೃತಿ ಮಂತ್ರ 4. ವಾಸುದೇವ ದ್ವಾದಶಾಕ್ಷರ ಮಂತ್ರ 5. ಬ್ರಹ್ಮಗಾಯತ್ರಿ ಮಂತ್ರ, 6. ಪುರುಷಸೂಕ್ತ ಮಂತ್ರ 7. ವಿಷ್ಣು ಷಡಕ್ಷರ ಮಂತ್ರ 8. .... ಈ 8ಕ್ಕೆ ಅಷ್ಟು ಮಹಾಮಂತ್ರ ಅಂತ ಹೆಸರು. ಈ 8 ಮಂತ್ರ ಜಪ ಮಾಡಿದಾಗ 7 ಕೋಟಿ ಮಹಾಮಂತ್ರ ಜಪ ಮಾಡಿದ ಹಾಗೆ ಆಗುತ್ತೆ ಎಂದು ಮಧ್ವಾಚಾರ್ಯರು ಹೇಳಿದ್ದಾರೆ. ಸಕಲಶಾಸ್ತ್ರಗಳನ್ನು ತಿಳಿದುಕೊಂಡ ಹಾಗೆ ಆಗುತ್ತೆ. ನವವೃಂದಾವನದಲ್ಲಿದ್ದಾಗ ಮಂತ್ರಾಲಯದಲ್ಲಿದ್ದಾಗ ಆಗಾಗ ಈ ಮಂತ್ರ ಜಪ ಮಾಡುತ್ತಿದ್ದೆ. ಅಷ್ಟ ಮಹಾಮಂತ್ರಗಳನ್ನು ಬರೆದು ಕೊಟ್ಟೆ.

ಕುಮುದ : ಈ ಮಂತ್ರಗಳನ್ನು ಗಂಡಸರು ಮಾತ್ರ ಜಪ ಮಾಡುವುದೆ?

ವಿಷ್ಣುತೀರ್ಥ : ಹೌದು ಗಂಡಸರು ಮಾತ್ರ ಮಾಡುವುದು.

ಕುಮುದ : ಇದಲ್ಲದೆ ದೇವರ ಪೂಜಾ ಪದ್ಧತಿ ಬೇರೆ ಬರೆದಿದ್ದೀರಾ?

ವಿಷ್ಣುತೀರ್ಥ : ದೇವರ ಪೂಜಾ ಪದ್ಧತಿ ಬರೆಯಲು ಶುರುಮಾಡಿದೆ. ಶ್ರೀಶಮೂರ್ತಿಗಳು ಪ್ರಕಟ ಮಾಡುತ್ತಿದ್ದರು. ಮುಂದುವರಿಸುತ್ತಾ ಮುಂದುವರಿಸುತ್ತಾ ನಾನೂರು ಪೇಜು ಪುಸ್ತಕ ಆಯಿತು. ಈಗ ಆ ಪುಸ್ತಕ ಖರ್ಚಾಗಿದೆ.

ಕುಮುದ : ನಿಮ್ಮ ಅಭಿಮಾನಿಗಳು ಅಥವಾ ನಿಮ್ಮ ಶಿಷ್ಯರು ತುಂಬ ಜನ ಇದ್ದಾರೆ. ಅವರು ನಿಮ್ಮ ಬಗ್ಗೆ ತುಂಬ ಹೊಗಳಿದ್ದಾರೆ. ಅವರೆಲ್ಲ ಎಲ್ಲಿದ್ದಾರೆ?

ವಿಷ್ಣುತೀರ್ಥ : ಹೆಚ್ಚು ಜನ ಬೆಂಗಳೂರಿನಲ್ಲಿ ಇದ್ದಾರೆ. ಬನ್ನಂಜೆ ಅಂತ ಇದ್ದಾರೆ. ಮದರಾಸಿನಲ್ಲಿ ಕೆಲವರು ಇದ್ದಾರೆ. ಆಂಧ್ರದಲ್ಲಿ ಬೇಕಾದಷ್ಟು ಜನ ಇದ್ದಾರೆ.

ಕುಮುದ : ದೊಡ್ಡಪ್ಪ ನಿಮ್ಮ ಇಷ್ಟು ವರ್ಷದ ಜೀವನದಲ್ಲಿ ಏನಾದರೂ ಅಪೂರ್ವ

Scanned by CamScanner

ವಾದದ್ದು ಇದ್ದರೆ ಹೇಳಿ.

ವಿಷ್ಣುತೀರ್ಥ : ಎಲ್ಲದಕ್ಕಿಂತ ಅಪೂರ್ವವಾದದ್ದು ಅಂದರೆ 52ನೇ ಇಸವಿಯಲ್ಲಿ ಒಂದು ನಡೀತು. ಕಾರ್ತೀಕ ಬಹುಳ ಚತುರ್ದಶಿ ಆಯಿತು. ಆ ಸಮಯಕ್ಕೆ ಸರಿಯಾಗಿ ನಾನು ಪುನಃ ನವವೃಂದಾವನಕ್ಕೆ ಬಂದೆ. ನಾನು ಅಲ್ಲೇ ಇರಬೇಕು ಅಂತ ಮಾಡಿದ್ದೆ. ನನಗೆ ಕಡಲೆ ಕಾಳು, ಹೆಸರು ಕಾಳು ಬೇಕಾಗಿತ್ತು. ಹೆಚ್ಚು ತಗೊಳ್ಳೊಕ್ಕೆ ಆಗಲಿಲ್ಲ. ಸುಮಾರು 7-8 ದಿನಕ್ಕೆ ಆಗುವಷ್ಟು ತಗೊಂಡು ಉಳಿದದ್ದನ್ನು ತಂದುಕೊಡುವುದಕ್ಕೆ ಒಬ್ಬರಿಗೆ ದುಡ್ಡು ಕೊಟ್ಟು ಬಂದೆ. ಪದ್ಮನಾಭ ತೀರ್ಥರ ಆರಾಧನೆ ಮುಗಿದು ಹೋದ ಮೇಲೆ ಎಲ್ಲ ಹೊರಟು ಹೋದರು. ನಾನು ಒಬ್ಬನೇ ಉಳಿದುಕೊಂಡೆ. ನನ್ನ ಹತ್ತಿರ ಇದ್ದ ಕಡಲೆಕಾಳು 7-8 ದಿನದಲ್ಲಿ ಮುಗಿದು ಹೋಯಿತು. ಏನೂ ಆಹಾರ ಇಲ್ಲದಾಯಿತು. ನಾನು ಹೇಳಿದ್ದವರು ಅಲ್ಲಿಗೆ ಬಂದಾಗ ಒಂದು ಹುಲಿ ಒಂದು ಕರು ಹಿಡಿದುಕೊಂಡು ಹೋಗಿದ್ದನ್ನ ನೋಡಿ ಹೆದರಿಕೊಂಡು ವಾಪಸು ಹೊರಟು ಹೋದರು. ಈ ವಿಷಯ ನನಗೆ ಗೊತ್ತಿಲ್ಲ. ನನಗೆ ಆಹಾರ ಇಲ್ಲದ ಹಾಗೆ ಆಯಿತು. ಒಂದು ದಿನ ಆಯಿತು ಎರಡು ದಿನ ಆಯಿತು. 3 ದಿನ ಆಯಿತು. ಹೀಗೆ 4 ದಿನ ಏನೂ ಇಲ್ಲದೆ ಉಪವಾಸ ಆಯಿತು. ಸೀತಾನ್ವೇಷಣೆಗೆ ಹೊರಟ ಹನುಮಂತ ಅವರು ಸೀತಾನ್ವೇಷಣೆ ಬಿಟ್ಟು ಪ್ರಾಯೋಪವೇಷ ಮಾಡಿದರು ಎಂದು ಕತೆ ಬರತ್ತೆ. ಆ ಸಮಯದಲ್ಲಿ ನನಗೆ ಅದೇ ಹೊಳೆಯಿತು. ರಾಮದೇವರ ಕತೆ ಓದುತ್ತಾ ಉಪಾಸ ಮಾಡುವುದು. ಹೇಗಿದ್ದರೂ ಉಪವಾಸ ಆಗಿದೆ ಅಂದ ಮೇಲೆ ರಾಮದೇವರ ಕತೆ ಓದುತ್ತಾ ಇದ್ದೆ 8 ದಿನ ಉಪವಾಸ ಇದ್ದರೂ ಒಂಬತ್ತು ವೃಂದಾವನಗಳಿಗೂ ಅಭಿಷೇಕ ಪೂಜೆ ಮಾಡುವ ಶಕ್ತಿ ಇತ್ತು. ಬರೀ ನೀರು ಕುಡೀತಿದ್ದೆ. ಎಷ್ಟು ಅಂತ ಕುಡಿಯುವುದು? ಆದರೂ ಒಂದು ಸ್ವಲ್ಪವೂ ಆಯಾಸ ಆಗಲಿಲ್ಲ. ಒಂಬತ್ತನೆ ದಿವಸ ಸ್ವಲ್ಪ ಆಯಾಸ ಕಾಣಿಸಿತು. ಅಷ್ಟು ಹೊತ್ತಿಗೆ ಒಂದು ಸೂಚನೆ ಬಂತು. ನೋಡಪ್ಪ, ನೀನು ಇನ್ನು ಇಲ್ಲಿ ಇರಬೇಡ, ಹೊರಟು ಹೋಗು, ಎಂದರು. ನೋಡಿ ಸ್ವಾಮಿ ನದಿ ಬಂದಿದೆ. ನಾನು ಹೇಗೆ ಹೋಗಲಿ? ಎಂದೆ ಸ್ವಪ್ನದಲ್ಲಿ ಒಂದು ಸೂಚನೆ ಕೊಟ್ರು. ಒಬ್ಬ ಮನುಷ್ಯ ರಾಮಕೃಷ್ಣ ಎಂಬುವನು ಹಗ್ಗ ಹಾಕಿ ಹರಿಗೋಲಲ್ಲಿ ಕೂಡಿಸಿ ನನ್ನನ್ನ ತಳ್ಳಿಬಿಡುತ್ತಾನೆ. ನಾನು ಆ ಕಡೆ ದಡಕ್ಕೆ ಹೋಗಿ ಸೇರಿಕೊಂಡೆ. ಅದರ ಅರ್ಥ ನಾನು ನಿನ್ನನ್ನು ದಾಟಿಸುತ್ತೇನೆ ಹೆದರಿಕೊಬೇಡ ಅಂತ ಅಂದರು. ಹಾಗೇ ಆಗಲಿ ಸ್ವಾಮಿ ಅಂದೆ. ಆಮೇಲೆ 11ನೇ ದಿನ ಉಪವಾಸ. ಅವತ್ತು ಸ್ನಾನ ಸಂಧ್ಯಾವಂದನೆ ಮಾಡಿಕೊಂಡು ಬಂದು ನೀವು ದಾಟಿಸುತ್ತೀರಿ ಎಂದು ಹೇಳಿದ್ದೀರಿ, ಸಂತೋಷ. ರಾಮನ ಪಟ್ಟಾಭಿಷೇಕ ಮುಗಿಸಿಕೊಂಡು ನಾಳೆ ಹೋಗುತ್ತೀನಿ, ಅಪ್ಪಣೆ ಕೊಡಿ ಎಂದೆ, ಆಗಲಿ ಎಂದರು. ಮತ್ತೊಂದು ಸಲ 5ನೇ ದಿನದಿಂದ ವೃಂದಾವನಗಳ ಅಭಿಷೇಕ ನಿಂತಿತ್ತು. ಸ್ನಾನಮಾಡಿ 9 ವೃಂದಾವನಕ್ಕೂ ಒಂದು ಭಾಗಕ್ಕೆ ಅಭಿಷೇಕ ಮಾಡಿ ದೇವರ ಪೂಜೆ ಮಾಡಿ ರಾಮಾಯಣ ಶುರು ಮಾಡಿಕೊಂಡು ಎಲ್ಲ ಮುಗಿಯುವ ಹೊತ್ತಿಗೆ ಮಧ್ಯಾಹ್ನ ಮೂರು, ಮೂರೂವರೆ ಗಂಟೆ ಆಯಿತು. ನನಗೆ ಆಯಾಸ ಆಗಿತ್ತು. ಅಲ್ಲಿ ಒಂದು ಕಂಬ ಇತ್ತು, ಅದನ್ನು ಒರಗಿಕೊಂಡೆ. ಹಾಗೇ ಜೊಂಪು ಬಂತು. ಕಣ್ಣು ಬಿಟ್ಟು ನೋಡಿದರೆ 4.30 ಗಂಟೆ. ನೂರಾರು ಗರುಡಪಕ್ಷಿಗಳ ಕೀಕೀ ಅಂತ

Scanned by CamScanner

ತಲೆ ಮೇಲೆ ಹಾರುಡುವುದಕ್ಕೆ ಶುರು ಮಾಡಿದವು.

ಶಾಸ್ತ್ರ ಏನು ಹೇಳುತ್ತೆ ಅಂದರೆ ಎರಡು ಗರುಡಪಕ್ಷಿ ಕಂಡರೆ ಹೊರಟುಹೋಗಬೇಕು ಅನ್ನುತ್ತೆ. ಅಂಥವರಲ್ಲಿ ನೂರಾರು ಗರುಡಪಕ್ಷಿಗಳು ಕೈಗೆ ಎಟಕುತ್ತೊ ಎನ್ನುವ ಹಾಗೆ ಹಾರಾಡುತ್ತಿದ್ದವು. ನೂರಾರು ಗರುಡ ಪಕ್ಷಿಗಳನ್ನು ನಾನು ಹೀಗೆ ನೋಡೇ ಇರಲಿಲ್ಲ. ನಾನು ವ್ಯಾಸರಾಯರ ಬಳಿ ಹೋಗಿ ಇವತ್ತು ಹೊತ್ತಾಗಿ ಹೋಗಿದೆ. ಇವತ್ತು ಒಂದು ದಿನ ಅಪ್ಪಣೆ ಕೊಡಿ. ನಾಳೆ ಅಭಿಷೇಕ ಮಾಡಿಕೊಂಡು ಹೊರಡುತ್ತೀನಿ ಎಂದೆ. ರಾತ್ರಿ ಮಲಗಿಕೊಂಡೆ. ವ್ಯಾಸರಾಯರು ನನ್ನನ್ನ ಯಾಕೆ ಹೊರಟುಹೋಗು ಅಂತ ಹೇಳಿದರು ಅಂತ ಅವತ್ತಿನವರೆಗೂ ನನಗೆ ಗೊತ್ತಾಗಲಿಲ್ಲ. ಮಾರನೆ ದಿನ ಗೊತ್ತಾಯಿತು. ನಾನು ಇದ್ದ ಜಾಗಕ್ಕೆ ಕಾಂಪೌಂಡ್ ಹಿಂಭಾಗಕ್ಕೆ ಹದಿನಾರು ಹೆಜ್ಜೆ ದೊಡ್ಡ ಹುಲಿ, ಇಷ್ಟು ದಪ್ಪ ಮುಖ. ಅದು ದಿನ ಒಂದೊಂದು ಹಸು ಹಿಡಿದು ತಿನ್ನುತ್ತಿತ್ತು. ನಾನು ನವವೃಂದಾವನದಲ್ಲಿದ್ದಿದ್ದು ಒಂದುದಿನವೂ ಅದರ ಕಣ್ಣಿಗೆ ನಾನು ಬಿದ್ದಿಲ್ಲ, ನನ್ನ ಕಣ್ಣಿಗೆ ಅದು ಬಿದ್ದಿಲ್ಲ. ಹೀಗೆ ರಾಯರು ನನ್ನನ್ನು ಕಾಪಾಡಿದ್ದರು. ಅದಕ್ಕೇ ಹೊರಟುಹೋಗು ಅಂತ ಸೂಚನೆ ಕೊಟ್ಟರು. ನಾನು ದಿನವೂ, ಎಷ್ಟೋ ದಿನ 4 ಗಂಟೆಗೇ (ಬೆಳಗಿನ ಜಾವ) ಎದ್ದು ನದಿಗೆ ಸ್ನಾನಕ್ಕೆ ಹೋಗುತ್ತಿದ್ದೆ. ಅಂಥ ಸಮಯದಲ್ಲಿ ನನ್ನನ್ನು ಕಾಪಾಡಿದ್ದಾರೆ. ವ್ಯಾಸರಾಯರ ಶಿಷ್ಯ ರಾಯರ ಲಂಗೋಟಿ ಒಗೆಯುತ್ತಿದ್ದರಂತೆ. ಒಂದು ಹುಲಿ ಬಂದು ಹಾಂ ಅಂತಂತೆ. ವ್ಯಾಸರಾಯರ ಲಂಗೋಟಿ ಇದು. ನೀನೇನು ಮಾಡ್ತಿ ಹೋಗು ಎಂದನಂತೆ. ಈ ಅನುಭವ ನನಗೆ ಆಯಿತು.

12ನೇ ದಿನ ಬೇಗ ಎದ್ದು ನದೀಲಿ ಸ್ನಾನ ಮಾಡಿಕೊಂಡು ಬಂದು ದೇವರ ಪೂಜೆ ಮಾಡಿ, ಆಯಿತು ಸ್ವಾಮಿ, ನೀವು ದಾಟಿಸುತೀನಿ ಎಂದು ಹೇಳಿದ್ದೀರಿ, ನಾನು ಹೊರಡುತೀನಿ ಎಂದೆ. ದೇವರ ಪೂಜೆದು ಒಂದು ಗಂಟು, ಪಾರಾಯಣದ ಒಂದು ಗಂಟು ಎರಡು ಸಿದ್ಧ ಮಾಡಿ ಉಳಿದ ಪಾತ್ರೆ ಪದಾರ್ಥ ಆಮೇಲೆ ತಗೊಂಡು ಹೋಗೋದು ಅಂತ ಅದನ್ನ ಒಂದು ಕಡೆ ಇಟ್ಟು ನದಿ ಹತ್ತಿರಕ್ಕೆ ಬಂದೆ. ಆಗ ಸುಮಾರು ಬೆಳಗ್ಗೆ 8 ಗಂಟೆ. ಒಂದು ಬಂಡೆ ಇತ್ತು, ಇಳಿದೆ. ನೀರಲ್ಲಿ ಮುಳುಗೇಬಿಟ್ಟೆ. ನನಗೆ ಈಜೂ ಬರೊಲ್ಲ. ನೀವು ದಾಟಿಸುತ್ತೀರಿ ಎಂದು ಭರವಸೆ ಕೊಟ್ಟಿದ್ದಿರಿ, ಮಧ್ಯ ನೀರಿನಲ್ಲಿ ಮುಳುಗಿಸುತ್ತಿದ್ದೀರಲ್ಲ ಎಂದುಕೊಂಡೆ. ಅಯ್ಯೋ ಅಪ್ಪ ಎನ್ನಲಿಲ್ಲ. ಮೇಲಕ್ಕೆ ಬಂದಾಗ ಉಸಿರು ತಗೊಳ್ಳೊದು ಮತ್ತೆ ಕೆಳಗೆ ಮುಳುಗಿದ್ದು ಏಳೋದು ಮಾಡುತ್ತಿದ್ದೆ. ಅರ್ಧ ಗಂಟೆ ಮೇಲೆ ಹೀಗೆ ಒದ್ದಾಡಿದೆ. ಅಪಮೃತ್ಯು ಪರಿಹರಿಸೋ ಅನಿಲದೇವ ಎಂದು ವ್ಯಾಸರಾಯರನ್ನು ಬೇಡಿಕೊಂಡೆ. ವ್ಯಾಸರಾಯರು ಅಪ್ಪಣೆ ಕೊಡಿಸಿದರು, ನಾನು ನೋಡಿಕೋತೀನಿ. ನಾನು ದಾಟಿಸುತ್ತೀನಿ, ಎಂದರು. ಹೊರಟೆ. ಈಗ ಅಪಮೃತ್ಯುವಿಗೆ ತುತ್ತಾದೆ ಎಂಬ ಅಪಕೀರ್ತಿ ನಿಮಗೆ ಬರೊಲ್ಲವೆ? ಹೀಗೆ ಪ್ರಾರ್ಥಿಸಿದೆ. ಹೀಗೆ 40 ನಿಮಿಷ ಆದ ಮೇಲೆ ಕಾಲಿಗೆ ನೆಲ ಸಿಕ್ಕಿತು. ಸ್ವಲ್ಪ ಧೈರ್ಯ ಬಂತು. ಆಮೇಲೆ ಸೊಂಟ ಮಟ್ಟಕ್ಕೆ ಬಂತು. ಆಮೇಲೆ ಪೂರ್ತಿ ದಡ ಸೇರಿದೆ. ಅಲ್ಲಿಗೆ ಮುಖ್ಯವಾದ ಭಾಗ ಮುಗಿತು. ದಡಕ್ಕೆ ಬಂದು ಬಟ್ಟೆ ಹಿಂಡಿಕೊಂಡು ಗಂಟು ಸರಿಮಾಡಿಕೊಂಡು ಊರಿಗೆ ಹೊರಟುಹೋದೆ. ಎಲ್ಲರೂ ಇಷ್ಟು ದಿನ ಆಹಾರಕ್ಕೆ ಏನು ಮಾಡಿದಿರಿ ಎಂದರು. 12 ದಿನ ಉಪವಾಸ. ಎಲ್ಲರಿಗೂ

Scanned by CamScanner

ಆಶ್ಚರ್ಯ. ಅಲ್ಲಿ ಪೂಜಾರರು ರಾಜಾಚಾರ್ ಎಂಬುವರು ನನ್ನನ್ನು ಕರೆದುಕೊಂಡು ಹೋಗಿ ಬಿಸಿಬಿಸಿ ಅಡಿಗೆ ಮಾಡಿ ಬಡಿಸಿದರು. ಹನ್ನೆರಡು ದಿನ ಉಪವಾಸ ಇದ್ದಿದ್ದು ಏನು ಸೇರುತ್ತೆ? ಊಟದ ಶಾಸ್ತ್ರ ಮಾಡಿ ಸುಧಾರಿಸಿಕೊಂಡೆ. ನೋಡಪ್ಪ ಇನ್ನೊಂದು ಕೆಲಸ. ನಾನು ಬಕೆಟ್ ಪಾತ್ರೆ ಎಲ್ಲ ಅಲ್ಲಿ ಇಟ್ಟು ಬಂದಿದ್ದೀನಿ. ಜೊತೆಲಿ ಹೋಗಿ ತಗೊಂಡು ಬರೋಣ ಎಂದೆ. ಸುಮಾರು 4 ಗಂಟೆ ಹೊತ್ತಿಗೆ ಇಬ್ಬರೂ ಹೋಗಿ ತಗೊಂಡು ಬಂದೆವು. ರೂಂಗೆ ಬಂದು ಅರ್ಧ ಗಂಟೆ ಆಗಿಲ್ಲ. ಒಂದು ಹುಲಿ ಬಾಗಿಲಲ್ಲಿ ಒಂದು ಹಸುನ ಹೊಡೆದು ಹಾಕಿತಂತೆ. ಅರ್ಧ ಗಂಟೆ ವ್ಯತ್ಯಾಸ ನೋಡಿ. ಹೀಗೆ ಆ ಹುಲಿಯಿಂದ ನನ್ನನ್ನು ವ್ಯಾಸರಾಯರು ರಕ್ಷಣೆ ಮಾಡಿದ್ದರು. ಇದೇ ನನ್ನ ಅನುಭವದಲ್ಲಿ ಅತ್ಯಂತ ಮುಖ್ಯವಾದುದು.

55ನೇ ಇಸವಿಯಲ್ಲೂ ನದಿ ದಾಟಿಕೊಂಡೆ ಹೋಗಿದ್ದೆ. ಆರಾಧನೆ ಸಮಯದಲ್ಲೂ ನೂರಾರು ಜನರು ನದಿ ದಾಟಿಕೊಂಡೇ ಓಡಾಡುತ್ತಿದ್ದರು. ನಾನೂ ಹಾಗೇ ಮಾಡುತ್ತಿದ್ದೆ.

ಕುಮುದ : ನೀರಲ್ಲಿ ಯಾಕೆ ಮುಳುಗಿಕೊಂಡಿರಿ?

ವಿಷ್ಣುತೀರ್ಥ : ನೀರು ಜಾಸ್ತಿ ಇತ್ತು. ಆಳ. ಮೊದಲನೆ ಅನುಭವ. 12 ದಿನ ಉಪವಾಸ. 8 ದಿನ ಸುಸ್ತು ಇಲ್ಲದೆ 9 ವಂದಾವನಗಳಿಗೆ ಅಭಿಷೇಕ ಮಾಡಿದ್ದು, ಪಟ್ಟಾಭಿಷೇಕ ಓದಿದ್ದು, ಆಮೇಲೆ ಈಜು ಬರದೆ ನದಿ ದಾಟ್ಟಿದ್ದು. ಇದು ಅತ್ಯಂತ ಮುಖ್ಯವಾದ ಅನುಭವ.

ಕುಮುದ : ಇನ್ನೇನಾದರೂ ಅನುಭವ ಇದ್ದರೆ ಹೇಳಿ.

ವಿಷ್ಣುತೀರ್ಥ : ಸುಮಾರು 1964-65ನೆಯ ಇಸವಿಯಲ್ಲಿ ನನಗೆ ಕಾಮಾಲೆ ಬಂದಿತ್ತು. ಕಾಮಾಲೆ ಅಂತ ನನಗೆ ಗೊತ್ತಿಲ್ಲ. ಜ್ವರ ಬಂತು. ಮೂತ್ರ ಅರಿಶಿನ ಬಣ್ಣಕ್ಕೆ ಆಯಿತು. ಆಗ ಗೊತ್ತಾಯಿತು ಕಾಮಾಲೆ ಆಗಿದೆ ಅಂತ. ಆಷಾಢ ಶುದ್ಧ ಏಕಾದಶಿ ಬಂತು. ಉಪವಾಸ ಮಾರನೆ ದಿನ ಪಾರಣೆ ಮಾಡಿದೆ. ಪಕ್ಕದಲ್ಲೇ ಒಂದು ಮಹಲ್ ಇತ್ತು (ಸ್ಪಷ್ಟವಾಗಿಲ್ಲ) ರೂಂ ಕ್ಲೀನ್ ಮಾಡ್ತಿದ್ರು. ಅಲ್ಲಿ ಮಲಗಿಕೊಳ್ಳೋಣ ಅಂತ ಹೋದೆ. ಅವತ್ತು 4 ಗಂಟೆಗೆ ಎದ್ದು 11 ಗಂಟೆವರೆಗೆ ಅಭಿಷೇಕ ಅಡಿಗೆ ಎಲ್ಲ ಮಾಡಿ ಪಾತ್ರೆ ತೊಳೆದು ಎಲ್ಲ ಮಾಡೋ ಹೊತ್ತಿಗೆ ಆಯಾಸ ಆಯಿತು. ಮಲಗಿಕೊಳ್ಳೋಣ ಅಂತ ಹೋದೆ. ಕಪ್ಪೆ ತರಹ ನನ್ನ ಕಾಲ ಹತ್ತಿರ ಚಿಲುಚಿಲು ಅಂತ ಆಯಿತು. ಕೈಯಿಂದ ಝಾಡಿಸಿದೆ 2 ಸಲ 3 ಸಲ 4 ಸಲ ಹೀಗೆ ಆಯಿತು. ಬಟ್ಟೆಯಲ್ಲೆ ತೆಗೆದು ಹೀಗೆ ಒಗೆದೆ. ಆಗ ಅದು ನಾಗರಹಾವು ಅಂತ ಗೊತ್ತಾಯಿತು. ಜ್ವರ ಇದ್ದಾಗ ಧಂ ಧನ್ವಂತರಿ ಅಂತ ನರಸಿಂಹ ಮಂತ್ರ ಹೇಳಿಕೊಳ್ಳುತ್ತಿದ್ದೆ. ಆ ಯೋಚನೇಲಿ ಹಾವೇ ಅಲ್ಲವೇ ಒಂದೂ ಗೊತ್ತಾಗುತ್ತಿರಲಿಲ್ಲ. ಆಮೇಲೆ ಗೊತ್ತಾಯಿತು. ಹಾವು ಅಂತ. ಆಮೇಲೆ ವ್ಯಾಸರಾಯರ ಹತ್ತಿರ ಬಂದು ದೀಪ ಹಚ್ಚಿ ನನ್ನನ್ನು ಕಾಪಾಡಿದೀರಿ ಎಂದು ನಮಸ್ಕಾರ ಮಾಡಿ ಬಂದು ಮಲಗಿಕೊಂಡೆ. ಈ ತರಹ ಹಾವಿನ ಅನುಭವ ಬೇಕಾದಷ್ಟು ಸಲ ಆಗಿದೆ. ಒಂದು ಸಲ ಸುಧೀಂದ್ರತೀರ್ಥರ ವೃಂದಾವನಕ್ಕೆ ಅಭಿಷೇಕ ಮಾಡುತ್ತಿದ್ದಾಗ ಒಂದು ಸಂದಿಯಿಂದ ಬುಸ್ ಅಂತ ಒಂದು ಹಾವು ಬಂತು. ಏನಪ್ಪ ಸ್ವಾಮಿ ನಾನು ಅಭಿಷೇಕ ಮಾಡುತ್ತಿದ್ದೀನಿ ನೀನ್ಯಾಕೆ ಬಂದೆ ಎಂದೆ. ಅದು ಒಳಗೆ ಹೊರಟು ಹೋಯಿತು. ಏನು ಸ್ವಾಮಿ ನೀನು ಹೆದರಿಸುತ್ತ ಇದ್ದರೆ ನಾನು ಓಡಿಹೋಗುತ್ತೇನೆ ಎಂದೆ. ಅದು ಹೊರಟು

Scanned by CamScanner

ಹೋಯಿತು. ಇನ್ನೊಂದು ಸಲ, ಅಲ್ಲೊಂದು ಗವಿ ಇದೆ. ನಾನು ಯಾವಾಗಲೂ ಅದರ ಪಕ್ಕ ಕೂತುಕೊಂಡು ಜಪ ಮಾಡುತ್ತಿದ್ದೆ. ಪಕ್ಕದಲ್ಲೇ ಒಂದು ಬಾವಿ. ಮಧ್ಯಾಹ್ನ ಎರಡು ಗಂಟೆ ಇರಬಹುದು. ಗಾಯತ್ರಿ ಜಪ ಮಾಡುತ್ತಿದ್ದೆ. ಹಗ್ಗದ ಮೇಲೆ ಒಂದು ಹಾವು ಬಂದು ಹೀಗೆ ನೋಡ್ತಾ ಇತ್ತು. ಹೆಡೆ ಎತ್ತಿರಲಿಲ್ಲ. ನಾನು ಅದನ್ನೇ ದುರುಗುಟ್ಟಿ ನೋಡುತ್ತಿದ್ದೆ. ಆಮೇಲೆ ಟೀಕಾರಾಯರ ಸ್ಮರಣೆ ಮಾಡಿದೆ. ನಾನು ಜಪ ಮಾಡ್ತ ಕೂತಿದ್ದೀನಿ ನನ್ನನ್ನು ಯಾಕೆ ಹೆದರಿಸುತ್ತೀರಿ ಎಂದೆ. ಅದು ಹೊರಟು ಹೋಯಿತು. ಅದೇ ಹಾವು ಪದೇ ಪದೇ ಬಂತು. ನೀವು ಹೀಗೆ ಹೆದರಿಸುತ್ತಿದ್ದರೆ ನಾನು ಓಡಿಹೋಗುತ್ತೇನೆ ಅಷ್ಟೆ, ಅಂದೆ. ನಾನು ಒಳಗೆ ಕೂತುಕೊಂಡು ಜಪ ಮಾಡುತ್ತಿದ್ದೆ. ಹೊರಗಡೆ ಸುಮಾರು ಎರಡು ಅಡಿ ಸಣ್ಣಹಾವು ಕಾಣಿಸಿತು. ಅದು ಹೀಗೆ ನೋಡುತ್ತಾ ಇತ್ತು.

ಪದ್ಮನಾಭತೀರ್ಥರ ಹತ್ತಿರ ಯಾವಾಗಲೂ ಬಕೆಟ್ ಇಟ್ಟುಬಿಟ್ಟು ಮುಂದುಗಡೆಯ ಪ್ರಾಣ ದೇವರನ್ನು ನೋಡಲು ಬಂದೆ. ಅಲ್ಲಿ ಒಂದು ಹಗ್ಗ ಬಿದ್ದ ಹಾಗಿತ್ತು. ಇದೇನು ಹಗ್ಗ ಬಿದ್ದಿದೆ ಎಂದು ನೋಡಿದರೆ ಕರಿನಾಗರ. ನರಸಿಂಹದೇವರ ಹತ್ತಿರ ಮರೆಯಾಯ್ತು. ನನಗೆ ತುಂಬ ಹೆದರಿಕೆಯಾಯಿತು. ದೇವರನ್ನು ಪ್ರಾರ್ಥನೆ ಮಾಡಿಕೊಂಡೆ. ಆಮೇಲೆ ಒಂದು ಸಲ ಮಲೇರಿಯ ಜ್ವರ ಬಂದಿತ್ತು. ಮುಖ ತೊಳೆದುಕೊಂಡು ಬರಲು ನದಿಗೆ ಹೋಗುತ್ತಿದ್ದಾಗ ಒಂದು ನಾಗರ ಹಾವು ಹೆಡೆ ಎತ್ತಿ ಬೇಗ ಬೇಗ ಹೋಗುತ್ತಿತ್ತು. ಹಾವಿನ ಅನುಭವ ತುಂಬ ಸಲ ಆಗಿದೆ.

ಕುಮುದ : ಮಲೇರಿಯ ಜ್ವರ ಬಂದಿದ್ದು ಅಂದಿರಲ್ಲ, ಏನು ಔಷಧಿ ಮಾಡಿಕೊಂಡಿರಿ?

ವಿಷ್ಣುತೀರ್ಥ : ಏನೋ ಔಷಧಿ ತಗೊಂಡೆ.

ಕುಮುದ : ಪುರುಷಸೂಕ್ತ ಅಚ್ಚು ಮಾಡುವ ನೆಪದಿಂದ ಮಹಾನುಭಾವರು ನೀವು ಜೊತೆಗೆ ಐದು ಜನ ಯತಿಗಳನ್ನು ಕರೆದುಕೊಂಡು ಬಂದು ನನಗೆ ನಿಮ್ಮ ಸೇವೆ ಮಾಡುವ ಅವಕಾಶ ಕೊಟ್ಟಿರಿ. ಆ ಭಾಗ್ಯ ಒದಗಿಸಿಕೊಟ್ಟು ಅವರ ಅನುಗ್ರಹ ಆಗುವಂತೆ ಮಾಡಿದಿರಿ. ಹೀಗೇ ಪದೇ ಪದೇ ನಿಮ್ಮ ಮತ್ತು ಯತಿಗಳ ಸೇವೆ ಮಾಡುವ ಭಾಗ್ಯ ಒದಗಿಸಿ ಕೊಡಬೇಕು ಅಂತ ಕೇಳಿಕೊಳ್ಳುತ್ತೀನಿ.

ವಿಷ್ಣುತೀರ್ಥ : ಅದರಲ್ಲಿ ಸಂದೇಹವೇ ಇಲ್ಲ. ನನ್ನ ಮಹಾ ಏನೂ ಇಲ್ಲ. ವ್ಯಾಸರಾಯರ ಲಂಗೋಟಿ ಒಗೆಯುತ್ತಿದ್ದ ಶಿಷ್ಯನ ಹಾಗೆ ನಾನೂ ಅವರಿಂದ ಮಹಾ ಆದೆ ಅಷ್ಟೆ.

ಕುಮುದ : ಮಹಾನುಭಾವರಿಗೆ ಯಾವ ಅನನುಕೂಲವೂ ಕಾಣಿಸೊಲ್ಲ. ಗಣನೆಗೆ ತೆಗೆದುಕೊಳ್ಳುವುದಿಲ್ಲ.

ವಿಷ್ಣುತೀರ್ಥ : ನೀವು ಎಷ್ಟು ತೊಂದರೆ ತಗೊಂಡು ಉಪಕಾರ ಮಾಡಿದಿರಿ. ಎಷ್ಟು ಸಹಾಯ ಮಾಡಿದಿರಿ. ಎಷ್ಟು ಹೇಳಿದರೂ ಸಾಲದು. ನಾನು ಅಲ್ಲಿಗೆ ಹೋದಾಗ ಒಂದು ಕಾಸೂ ಇರಲಿಲ್ಲ. ನೂರಾರು ಜನ ಬಂದರು, ಸಾವಿರಾರು ರೂಪಾಯಿ ಖರ್ಚಾಯಿತು. ಎಲ್ಲ ಅವರೇ ಕೊಟ್ಟರು, ಅವರೇ ಖರ್ಚು ಮಾಡಿದರು. ದುಡ್ಡಿನ ಮೇಲೆ ಆಸೆಯಿಲ್ಲ. ಎಷ್ಟು ಬರುತ್ತೊ ಅಷ್ಟು ಖರ್ಚು ಮಾಡಬೇಕು. ಯಾವುದು ಬಂದರೂ ಅಲ್ಲಲ್ಲೇ ಖರ್ಚು ಮಾಡಬೇಕು, ಕೂಡಿಡಬಾರದು. ಅದು ನನ್ನ ಪ್ರವೃತ್ತಿ. ಆಗಲೇ ಹೇಳಿದೆನಲ್ಲ ಆಗಿನ ಕಾಲಕ್ಕೆ

Scanned by CamScanner

6-7 ಸಾವಿರ ರೂಪಾಯಿ ಖರ್ಚಾಯಿತು. ಖರ್ಚಾಯಿತೆ ಹೊರತು ನನ್ನ ಹತ್ತಿರ ಏನೂ ಇಲ್ಲ.

ಕುಮುದ : ಸಮಲೋಷ್ಟ ಅಂತ ಏನೋ ಹೇಳುತ್ತಾರಲ್ಲ?

ವಿಷ್ಣುತೀರ್ಥ : ತೇನತ್ಯಕ್ತೇನ ಭುಂಜೀತಾಃ. ಪರಮಾತ್ಮ ಎಷ್ಟು ಕೊಡುತ್ತಾನೋ ಅಷ್ಟನ್ನೇ ಸ್ವೀಕರಿಸು ಎಂದು ಈಶಾವಾಸ್ಯ ಉಪನಿಷತ್ತಿನಲ್ಲಿ ಹೇಳುತ್ತೆ.

ಕುಮುದ : ಅಲ್ಲ, ಚಿನ್ನ ಒಂದೇ ಮಣ್ಣೂ ಒಂದೇ ಅಂತಾರಲ್ಲ . . .

ವಿಷ್ಣುತೀರ್ಥ : ಸಮಲೋಷ್ಟಾಶ್ಮ ಕಾಂಚನಃ (ಭಗವದ್ಗೀತೆ, 6ನೇ ಅಧ್ಯಾಯ) ಯಾರ ಮನೆಗಾದರೂ ಬಂದರೆ ಇದನ್ನು ನೋಡು ಅದನ್ನು ನೋಡು ಇವೆಲ್ಲ ಬೇಕು ಅನ್ನೋ ಮನೋಭಾವ ನನಗಿಲ್ಲ. ಗೀತಾ ಮನೇಲಿ ಅವರು ಇದು ತಗೊಳ್ಳಿ ಅದು ತಗೊಳ್ಳಿ ಅಂತ ಬಲವಂತ ಮಾಡುತ್ತಾರೆ. ನನಗೆ ಅದರಲ್ಲಿ ಯಾವ ಆಸಕ್ತಿಯೂ ಇಲ್ಲ.

ಕುಮುದ : ನಮ್ಮನೇಲಿ ಅನೇಕ ಲೋಪದೋಷಗಳಿವೆ. ಅವನ್ನು ಯಾವುದನ್ನೂ ಲೆಕ್ಕಿಸದೆ ಸಹಕರಿಸಿದಿರಿ.

ವಿಷ್ಣುತೀರ್ಥ : ಬಾಳಾಚಾರ್ ಅಂತ ದೊಡ್ಡ ಆಚಾರ್ಯರು ಇಷ್ಟೆಲ್ಲ ಪೂಜೆ ಮಾಡ್ತೀಯ ಮೈಲಿಗೇಲಿ ಊಟ ಮಾಡ್ತೀಯಲ್ಲ ಅಂತ ಕೇಳಿದರು. ನಾನು ಹೇಳಿದೆ, ನೋಡಿ ಸ್ವಾಮಿ, ನಮ್ಮನೇಲಿ ಮಡೀಲಿ ಯಾರೂ ಊಟ ಮಾಡೊಲ್ಲ, ಯಾರೂ ಅಡಿಗೆ ಮಾಡೊಲ್ಲ. ಹೋಗೋದು ಬಿಟ್ಟುಬಿಡಬೇಕು ಅಷ್ಟೆ. ನಾನು ಸನ್ಯಾಸಿ ಆದ ದಿನ ಎಲ್ಲ ಬಿಟ್ಟುಬಿಡುತೀನಿ.

ಕುಮುದ : ನಾನು ಕೇಳೋಣ ಅಂದುಕೊಂಡಿದ್ದೆ. ನೀವು ಸನ್ಯಾಸಿ ಆಗಬೇಕು ಅಂತ ಅಂದುಕೊಂಡಿದ್ದಿರಾ?

ವಿಷ್ಣುತೀರ್ಥ : ಸಂನ್ಯಾಸಿಯಾಗುವುದು ನಮ್ಮ ಇಚ್ಛೆಯೇ? ಅದಕ್ಕೂ ಯೋಗ ಬೇಕು.

ಕುಮುದ : ಬ್ರಹ್ಮಚಾರಿ ಆಗಿ ದೇವರಸೇವೆ ಮಾಡುವುದು ಹೆಚ್ಚೋ ಸಂನ್ಯಾಸಿ ಆಗಿ ಮಾಡುವುದು ಹೆಚ್ಚೋ?

ವಿಷ್ಣುತೀರ್ಥ : ಸಂನ್ಯಾಸಿ ಆಗಿ ಮಾಡುವ ಸೇವೆ ಹೆಚ್ಚು. ಸಂನ್ಯಾಸ ಹೆಚ್ಚು. ಆದರೆ ಅದು ಭಂಗ ಆದರೆ ಅಷ್ಟು ನೀಚ. ತುಂಬ ಆಯಾಸ ಆಯಿತು, ಅಂದರೆ ಲೋಟ ನೀರು ಕೊಡಿ ಅಂತ ಕೇಳಿ ಕುಡೀಬಹುದು. ಆದರೆ ಯತಿ ಆಗಿದ್ದಾಗ ನೀರು ಕೊಡಿ ಎಂದು ಕೇಳಿದರೆ ಭಂಗ ಆಯಿತು.

ಕುಮುದ : ನಮ್ಮ ಲೋಪದೋಷಗಳನ್ನು ಮನ್ನಿಸಿ ಬಾಲಭಾಷೆಯಲ್ಲಿ ಕೇಳಿದ ಪ್ರಶ್ನೆಗಳಿಗೆ ಸಮಾಧಾನದಿಂದ ಉತ್ತರಿಸಿದ್ದೀರಿ.

ವಿಷ್ಣುತೀರ್ಥ : ಎಲ್ಲರೂ ನನ್ನನ್ನು ವಿಶ್ವಾಸದಿಂದ ನೋಡುತ್ತಾರೆ. ಯಾರೂ ಅಸಡ್ಡೆಯಿಂದ ನೋಡೋಲ್ಲ.

ಕುಮುದ : ಸಾಧಕರಿಗೆ ನಿಮ್ಮ ಸಂದೇಶ ಏನು?

ವಿಷ್ಣುತೀರ್ಥ : ಎಲ್ಲರೂ ಚೆನ್ನಾಗಿ ಸಾಧನೆ ಮಾಡಿ ಅನ್ನುವುದೇ ಸಂದೇಶ.

ಕುಮುದ : ಅನೇಕ ಧನ್ಯವಾದಗಳು ಅನೇಕ ಪ್ರಣಾಮಗಳು.

Scanned by CamScanner

Scanned by CamScanner